ಪಿ. ಎಚ್.ಡಿ ಪದವಿಗಾಗಿ ಸಲ್ಲಿಸುವ ಸಂಶೋಧನಾ ಪ್ರಬಂಧದ ಸಾರಲೇಖ

ಸಂಶೋಧನಾ ವಿಷಯ

ಕರಾವಳಿ ಕರ್ನಾಟಕದ ಮುಸ್ಲಿಂ ಬರಹಗಾರರ ಕಾದಂಬರಿ–ಕಥನ ಸಾಹಿತ್ಯದಲ್ಲಿ ಸಮಾಜ ಮತ್ತು ಸಂಸ್ಕೃತಿ

ಸಂಶೋಧನಾ ವಿದ್ಯಾರ್ಥಿನಿ

ಸಾಜಿದಾ

ಮಾರ್ಗದರ್ಶಕರು

ಡಾ. ಬಿ. ಉದಯ

ಪ್ರಾಧ್ಯಾಪಕರು

ಇತಿಹಾಸ ವಿಭಾಗ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ

ಇತಿಹಾಸ ವಿಭಾಗ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ–574199

ಸೆಪ್ಟೆಂಬರ್ –2022

ಕರಾವಳಿ ಕರ್ನಾಟಕದ ಮುಸ್ಲಿಂ ಬರಹಗಾರರ ಕಾದಂಬರಿ-ಕಥನ ಸಾಹಿತ್ಯದಲ್ಲಿ ಸಮಾಜ ಮತ್ತು ಸಂಸ್ಕೃತಿ

ಪೀಠಿಕೆ: ಅಧ್ಯಯನದ ಉದ್ದೇಶ, ವ್ಯಾಪ್ತಿ

ದಕ್ಷಿಣ ಭಾರತದ ಇತಿಹಾಸ, ಸಮಾಜ ಮತ್ತು ಸಂಸ್ಕೃತಿಗೆ ಕುರಿತಾದ ಅಧ್ಯಯನಗಳನ್ನು ಗಮನಿಸಿದರೆ ತೀರಾ ಇತ್ತೀಚಿನವರೆಗೆ ಬಹುತೇಕ ಎಲ್ಲಾ ಅಧ್ಯಯನಗಳು ರಾಜಕೀಯ ಇತಿಹಾಸವನ್ನು ಕೇಂದ್ರಿಕರಿಸಿ ನಡೆದವು. 1980-90ರ ದಶಕದಿಂದ ಈಚೆಗೆ ಇತಿಹಾಸ ಅಧ್ಯಯನ ವಿಧಾನಗಳು ಬಹಳಷ್ಟು ಬದಲಾವಣೆಗಳನ್ನು ಕಂಡುಕೊಂಡಿರುವುದನ್ನು ನಾವು ಕಾಣಬಹುದು. ಜಗತ್ತಿನ ವಿದ್ವಾಂಸರು ತಮ್ಮ ಅಧ್ಯಯನಗಳಲ್ಲಿ ಕೇವಲ ರಾಜಕೀಯ ಇತಿಹಾಸದ ಕಡೆಗೆ ಗಮನಹರಿಸದೆ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ವಿಚಾರಗಳ ಒಳ ಮತ್ತು ಹೊರ ನೋಟಗಳ ಕಡೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಾರೆ. ಈ ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೆ ಕೊಡುಗೆಯನ್ನು ನೀಡಿದ ಆಧುನಿಕ ಕರಾವಳಿ ಕನಾಟಕದ ಮುಸ್ಲಿಂ ಬರಹಗಾರರ ಕಾದಂಬರಿ-ಕಥನ ಸಾಹಿತ್ಯದಲ್ಲಿ ಅಡಕವಾಗಿರುವ ಮುಸ್ಲಿಂ ಜಗತ್ತಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಚಾರಗಳನ್ನು ಮರುನಿರೂಪಣೆಗೆ ಒಳಪಡಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೇ ಈ ಅಧ್ಯಯನದಲ್ಲಿ ಈ ಕಾಲಘಟ್ಟದಲ್ಲಿ ಬಂದಿರುವ ಮುಸ್ಲಿಂ ಸಮುದಾಯವನ್ನು ಪ್ರತಿನಿಧಿಸುವ ಚಾರಿತ್ರಿಕ ಕಾದಂಬರಿಗಳನ್ನೂ ಕುರಿತು ಚರ್ಚಿಸಲಾಗಿದೆ.

ಇತಿಹಾಸ ರಚನಾ ಕ್ರಮವು ಪ್ರಾಚೀನ, ಮಧ್ಯಕಾಲೀನ, ವಸಾಹತುಕಾಲ ಮತ್ತು ಆಧುನಿಕ ಕಾಲಗಳಲ್ಲಿ ನಿರಂತರ ಬದಲಾವಣೆಗೆ ಒಳಪಡುತ್ತಲೇ ಇವೆ. ಇಂತಹ ಬದಲಾವಣೆಯ ಕಾಲಘಟ್ಟದಲ್ಲಿ ನೆಲೆಯಲ್ಲಿ ಕಾದಂಬರಿಗಳು ಇತಿಹಾಸ ರಚನೆಯ ಆಕರಗಳಾಗಿ ಹೇಗೆ ನಿಲ್ಲಬಲ್ಲವು ಎನ್ನುವುದು ಒಂದು ಮಹತ್ತರವಾದ ಚರ್ಚೆಯಾಗಿದೆ. ಈ ಚರ್ಚೆಯನ್ನು ಕೈಗೆತ್ತಿಕೊಳ್ಳುವ ಮೊದಲು ಆಧುನಿಕೋತ್ತರತೆ ಎಂದರೇನು? ಎಂಬ ಪ್ರಶ್ನೆಗೆ ವಿವರಣೆಯನ್ನು ತಿಳಿದುಕೊಳ್ಳಬೇಕಾಗುತ್ತದೆ. ಆಧುನಿಕ ಕ್ರಮ ಹುಟ್ಟು ಹಾಕಿರುವ ದೃಷ್ಟಿಕೋನಗಳನ್ನು ತಿರಸ್ಕರಿಸುವ ಮತ್ತು ಅದರಲ್ಲಿನ ನ್ಯೂನ್ಯತೆಗಳನ್ನು ವಿಮರ್ಶಿಸುವ ಒಂದು ಕ್ರಮವನ್ನು ಆಧುನಿಕೋತ್ತರತೆ ಎನ್ನಬಹುದು. ಈ ನಿಟ್ಟಿನಲ್ಲಿ ಚರ್ಚೆಯನ್ನು ನಡೆಸುವಾಗ ಕೆಲವೊಂದು ಕಾದಂಬರಿಗಳು ಅಥವಾ ಲೇಖನಗಳು ಹೇಗೆ ಒಂದು ಸಮುದಾಯದ ಅಥವಾ ರಾಷ್ಟ್ರೀಯತೆಯ ಬಗೆಗೆ ಚರ್ಚೆಯನ್ನು ನಡೆಸುತ್ತಾ ಹೋಗುತ್ತದೆ. ಎಂಬುವುದು ಬಹಳ ಮುಖ್ಯವಾಗುತ್ತದೆ.

ಕನ್ನಡ ಸಾಹಿತ್ಯವು 1970ರ ಹೊತ್ತಿಗೆ ಬಹಳ ದೊಡ್ಡ ಬದಲಾವಣೆಗಳನ್ನು ಕಾಣುತ್ತದೆ. ಅಲ್ಲಿಯವರೆಗೂ ಸಾಹಿತ್ಯ ಕೃತಿಗಳು ಕೆಲವೇ ಜಾತಿ ಮತ್ತು ಸಮುದಾಯಗಳನ್ನು ಕುರಿತು ಚಿತ್ರಣವನ್ನು ನೀಡುತ್ತಿದ್ದವು, ಬೇರೆ ಬೇರೆ ಹಿನ್ನೆಲೆಗಳಿಂದ ಬಂದ ಸಾಹಿತಿಗಳು, ಕೃತಿ ರಚನೆಗೆ ತೊಡಗಿದಾಗ ಮೊದಲಿನ

ಕೃತಿಗಳಲ್ಲಿ ಕೇವಲ ಬಾಹ್ಯವಾಗಿ ಬಿಂಬಿತವಾಗಿದ್ದ ಪಾತ್ರಗಳು, ಮುಖ್ಯ ಪಾತ್ರಗಳಾಗಿ ಮಿಂಚಲು ಆರಂಭಿಸುತ್ತದೆ. ಕನ್ನಡ ಸಾಹಿತ್ಯದಲ್ಲಿ ಕಾದಂಬರಿಗಳು ತೀರಾ ಇತ್ತೀಚಿನ ಕೊಡುಗೆಯಾಗಿದ್ದರೂ ಕೂಡ ಅವುಗಳು ಸಮಾಜದ ಮೇಲೆ ಬೀರುವ ಪ್ರಭಾವದಿಂದಾಗಿ ತನ್ನ ಜನಪ್ರಿಯತೆಯನ್ನೂ ಹೆಚ್ಚಿಸಿಕೊಂಡಿದೆ. ಕಾದಂಬರಿಗಳು ಸಮಕಾಲೀನ ಸಮಾಜದ ವಿಚಾರವಾಗಿ ಜೊತೆಗೆ ಐತಿಹಾಸಿಕ ಘಟನೆಗಳನ್ನು ಸಮಾಜದ ಕುರಿತ ವಿಷಯವನ್ನು ವಸ್ತುವಿಷಯವಾಗಿ ಆಯ್ಕೆಮಾಡಿಕೊಂಡು ಘಟನೆಯನ್ನು ಊಹೆಯ ಮೂಲಕ ವಿವರಿಸುತ್ತಾ ಹೋಗುತ್ತದೆ. ಒಂದು ದೇಶದ ಸಂಸ್ಕೃತಿ, ಒಂದು ಸಮುದಾಯದ ಸಂಸ್ಕೃತಿಯನ್ನು ಮರೆತಿರುವ ಜನರನ್ನು ಎಚ್ಚರಿಸುವ ಕೆಲಸವನ್ನು ಕಾದಂಬರಿಗಳು ಮಾಡುತ್ತದೆ.

ಈ ನಿಟ್ಟಿನಲ್ಲಿ ಹಲವಾರು ಕಾದಂಬರಿಗಳು ತನ್ನ ಕೆಲಸವನ್ನು ಮಾಡಿದೆ. ಕೇವಲ ಕನ್ನಡ ಕಾದಂಬರಿಗಳು ಮಾತ್ರವಲ್ಲ, ಜಾಗತಿಕ ಮಟ್ಟದಲ್ಲಿಯೂ ಕೂಡ ಹಲವಾರು ಕಾದಂಬರಿಗಳು ಐತಿಹಾಸಿಕ ವಿಚಾರಗಳ ಜೊತೆಗೆ ಸಮುದಾಯವನ್ನು ಎಚ್ಚರಿಸುವ ಕೆಲಸವನ್ನು ಮಾಡುತ್ತಿವೆ. ಅಲೆಕ್ಸ್ ಹೆಲಿ ಎನ್ನುವ ಅಮೇರಿಕಾದ ಕಾದಂಬರಿಕಾರ "ರೂಟ್ಸ್" ಎನ್ನುವ ಕಾದಂಬರಿಯನ್ನು 1976ರಲ್ಲಿ ರಚಿಸಿ ಪ್ರಕಟಿಸುತ್ತಾನೆ. ಈ ಕಾದಂಬರಿಯು ಕೇವಲ ಸಾಹಿತ್ಯಲೋಕಕ್ಕೆ ಒಂದು ಕೊಡುಗೆಯಾಗಿ ಉಳಿದಿಲ್ಲ, ಬದಲಾಗಿ ಇದು ಆಫ್ರಿಕಾ ಮತ್ತು ಅಮೇರಿಕ ದೇಶದ ನಡುವಿನ ಐತಿಹಾಸಿಕ ಘಟನೆಯನ್ನು ಚರ್ಚಿಸುತ್ತಾ ಸಾಗುತ್ತದೆ. 18ನೇ ಶತಮಾನದಲ್ಲಿ ಆಫ್ರಿಕಾದ ಕುಂತ ಕಿಂತೆ ಎನ್ನುವ ತರುಣಾವಸ್ಥ ಯುವಕನ ಮಾಹಿತಿಯನ್ನು ನೀಡುತ್ತದೆ. ಇವನು ಆಫ್ರಿಕಾದಲ್ಲಿ ಸಾಮಂತನಾಗಿ ಮಾರಾಟವಾಗುತ್ತಾನೆ. ಮುಂದೆ ಇವನನ್ನು ಆಫ್ರಿಕಾದಿಂದ ಉತ್ತರ ಅಮೇರಿಕಾಕ್ಕೆ ಸಾಗಿಸಲಾಗುತ್ತದೆ, ಇಲ್ಲಿಂದ ಉತ್ತರ ಅಮೇರಿಕಾದಲ್ಲಿ ಕುಂತ ಕಿಂತೆ ಎದುರಿಸುವ ತೊಂದರೆಗಳನ್ನು (ಸವಾಲು) ಚರ್ಚಿಸುತ್ತ ಮುಂದೆ ಸಾಗುತ್ತದೆ. ಈ ಕಾದಂಬರಿಯು ಅಮೇರಿಕಾದಲ್ಲಿ ಒಂದು ಸಾಂಸ್ಕೃತಿಕ ಸಂವೇದನೆಯನ್ನು ಹುಟ್ಟಿಸುತ್ತದೆ. ಈ ಕಾದಂಬರಿಯು 20ನೇ ಶತಮಾನದಲ್ಲಿ, ಅಮೇರಿಕಾದ ಅತ್ಯಂತ ಪ್ರಮುಖವಾದ ಕೃತಿಯಾಗಿ ಒಂದು ಕ್ರಾಂತಿಯನ್ನೇ ಸೃಷ್ಟಿಸುತ್ತದೆ. ಹೀಗಾಗಿ ಈ ಕಾದಂಬರಿಯು ಆಫ್ರಿಕಾ ಮತ್ತು ಅಮೇರಿಕಾದ ನಡುವಿನ ಆ ಕಾಲಘಟ್ಟದ ಇತಿಹಾಸದ ಬಗೆಗಿನ ಬೆಲೆಕಟ್ಟಲಾಗದ ಆಕರವಾಗಿ ಬದಲಾಗಿದೆ. ಒಂದು ಕಾದಂಬರಿಯು ಈ ಸಮಾಜದಲ್ಲಿ ಎಷ್ಟು ದೊಡ್ಡ ಪ್ರಭಾವವನ್ನು ಬೀರಲು ಸಾಧ್ಯ ಎಂಬುದನ್ನು ಈ ಕಾದಂಬರಿಯು ಸಾಬೀತು ಪಡಿಸುತ್ತದೆ. ಈ ಕಾದಂಬರಿಯು ಕೇವಲ ಆಫ್ರಿಕಾ, ಅಮೇರಿಕಾ ದೇಶಗಳಲ್ಲಿ ಮಾತ್ರ ತನ್ನ ಪ್ರಭಾವವನ್ನು ವಿಸ್ತರಿಸಿಕೊಂಡಿಲ್ಲ ಬದಲಾಗಿ, ಇದರ ಪ್ರಭಾವವು ಕನ್ನಡ ಸಾಹಿತ್ಯ ಲೋಕದವರೆಗೂ ವಿಸ್ತರಿಸುತ್ತದೆ. ಜಗತ್ಪ್ರಸಿದ್ಧವಾದ 'ರೊಟ್ಸ್' ಎಂಬ ಈ ಕಾದಂಬರಿಯನ್ನು ಕನ್ನಡದ ಶ್ರೇಷ್ಟ ಬರಹಗಾರರಾದ ಬಂಜಗೆರೆ ಜಯಪ್ರಕಾಶ್‌ರವರು 'ತಲೆಮಾರು' ಎಂಬ ಶೀರ್ಷಿಕೆಯಡಿ, ಕನ್ನಡಕ್ಕೆ ಅನುವಾದಿಸಿದ್ದಾರೆ. ಆ ಮೂಲಕ ಕನ್ನಡಿಗರಿಗೂ ಅದರ ವಸ್ತುವಿಷಯವನ್ನು ತಿಳಿದುಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ.

ಹೆಡನ್ ವೈಟ್, ಅಮೇರಿಕಾದ ಪ್ರಸಿದ್ಧ ಇತಿಹಾಸಕಾರ ಅದರೊಂದಿಗೆ ಸುಪ್ರಸಿದ್ಧ ಆಧುನಿಕೋತ್ತರವಾದಿ ಚಿಂತಕ. ಇವನ ಪ್ರಸಿದ್ಧ ಕೃತಿ 'ದಿ ಹಿಸ್ಟೋರಿಕಲ್ ಟೆಕ್ಸ್ಟ್ ಎ ಲಿಟರರಿ ಅರ್‌ಟಿಫ್ಯಾಕ್ಟ್'. ಈ ಕೃತಿಯಲ್ಲಿ ಹೆಡೆನ್ ವೈಟ್, ಇತಿಹಾಸ ಮತ್ತು ಕಾದಂಬರಿಗಳ ಬಗೆಗೆ ತನ್ನ ಅಭಿಪ್ರಾಯವನ್ನು ಮಂಡಿಸುತ್ತಾ ಸಾಗುತ್ತಾನೆ. ಇವನು ಚರ್ಚೆ ನಡೆಸುವ ವಿಚಾರವು ಇತಿಹಾಸ ರಚನೆಯಲ್ಲಿ ಬಹಳ ಮಹತ್ತರವಾದ ಸ್ಥಾನವನ್ನು ಪಡೆದಿದೆ. ಇಲ್ಲಿ ಅಧ್ಯಯನಕ್ಕೆ ಒಳಪಡುವ ವಿಚಾರವು ಎಲ್ಲೊ ಒಂದು ಕಡೆ ಆಧುನಿಕೋತ್ತರವಾದ ಚಿಂತನೆಯ ಜೊತೆಗೆ ತನ್ನ ನಂಟನ್ನು ಬೆಸೆದುಕೊಂಡಿದೆ. ಈ ನಿಟ್ಟಿನಲ್ಲಿ ಮುಸ್ಲಿಂ ಸಮುದಾಯಕ್ಕೆ ಸಂಬಂಧ ಪಟ್ಟ ಹಾಗೇ ವಿವರಗಳನ್ನು ನೀಡುವ ಅನೇಕ ಕಾದಂಬರಿಗಳು ಕನ್ನಡ ಸಾಹಿತ್ಯ ಲೋಕದಲ್ಲಿ ರಚನೆಯಾಗಿದೆ. ಇವುಗಳಲ್ಲಿ ಆಯ್ದ ಕಾದಂಬರಿಗಳು ಮತ್ತು ಕಥನಸಾಹಿತ್ಯಗಳನ್ನು ಆಯ್ಕೆಮಾಡಿಕೊಂಡು ಮುಸ್ಲಿಂ ಸಮುದಾಯದ ಬೇರೆ ಬೇರೆ ಮಜಲುಗಳನ್ನು ಚರ್ಚಿಸುವ ಉದ್ದೇಶವನ್ನು ಈ ಅಧ್ಯಯನವು ಹೊಂದಿದೆ.

ಬೇರೆ ಬೇರೆ ಆಧುನಿಕೋತ್ತರವಾದಿ ಚಿಂತಕರ ಅಭಿಪ್ರಾಯಗಳ ಪ್ರಕಾರ ಕಾದಂಬರಿಗಳು ಇತಿಹಾಸ ರಚನೆಯಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತವೆ. ಒಬ್ಬ ಇತಿಹಾಸಕಾರನು ಸಂಕಥನವನ್ನು ರಚಿಸುವಾಗ ಕೈಗೊಳ್ಳುವ ಎಲ್ಲಾ ಕ್ರಮಗಳನ್ನು ಒಬ್ಬ ಕಾದಂಬರಿಕಾರನೂ ಮಾಡುತ್ತಾನೆ ಮೊದಲಿಗೆ ಒಂದು ಘಟನೆಯನ್ನು ಆಯ್ಕೆ ಮಾಡಿಕೊಂಡು, ಆ ಘಟನೆಯನ್ನು ನಿರೂಪಿಸುವ ಆಧಾರಗಳನ್ನು ಸಂಗ್ರಹಿಸಿ, ಸಂಕಥನವನ್ನು ರಚಿಸಬೇಕಾಗುತ್ತದೆ. ಇದನ್ನೆ ಒಬ್ಬ ಕಾದಂಬರಿಕಾರನೂ ನಿರ್ವಹಿಸುತ್ತಾನೆ. ಆದರೆ, ಕಾದಂಬರಿಕಾರ ತನ್ನ ಊಹೆಯ ಮೂಲಕ ಸಂಕಥನವನ್ನು ರಚಿಸುತ್ತಾನೆ. ಇಬ್ಬರ ನಡುವಿನ ನಿರೂಪಣಾ ಶೈಲಿಯಲ್ಲಿ ವ್ಯತ್ಯಾಸವಿರಬಹುದು, ಆದರೆ, ಇಬ್ಬರ ಉದ್ದೇಶವೂ ಒಂದೇ ಆಗಿರುತ್ತದೆ. ಘಟನೆಯನ್ನು ನಿರೂಪಿಸುವುದು ಈ ಅಧ್ಯಯನವು ಹಲವಾರು ಉದ್ದೇಶಗಳನ್ನು ಹೊಂದಿದೆ.

- ಒಂದು ಕಾದಂಬರಿಯು ಇತಿಹಾಸ ರಚನೆಗೆ ಹೇಗೆ ಆಕರವಾಗಬಲ್ಲದು ಎಂಬುವುದನ್ನು ನಿರೂಪಿಸುವುದು.
- ಕಾದಂಬರಿಗಳು ಇತಿಹಾಸದ ಘಟನೆಯನ್ನು ಹೇಗೆ ನಿರೂಪಿಸುತ್ತವೆ?
- ಕಾದಂಬರಿಗಳಲ್ಲಿ ಬರುವ ಬೇರೆ ಬೇರೆ ಸನ್ನಿವೇಶಗಳು, ಹೇಗೆ ಬಂದು ಭಾವಿಸಿದ ಸಮುದಾಯದ ಅಥವಾ ವರ್ಗದ ವಿವರಗಳನ್ನು ಗ್ರಹಿಸಬಲ್ಲವು ಎಂಬುವುದನ್ನು ನಿರೂಪಿಸುವುದು.
- ಕಾದಂಬರಿಗಳಲ್ಲಿ ನಿರೂಪಿತವಾಗಿರುವ ಮುಸ್ಲಿಂ ಐತಿಹಾಸಿಕ ಘಟನೆಗಳ ವಿವರಣೆ ಇತಿಹಾಸದಲ್ಲಿ ದಾಖಲಾಗಿದೆಯೇ ಎಂಬುವುದನ್ನು ಪರೀಕ್ಷಿಸುವುದು.

- ಕಾದಂಬರಿಗಳಲ್ಲಿ ಅಡಕವಾಗಿರುವ ಮುಸ್ಲಿಂ ಸಂಸ್ಕೃತಿಯ ಬೇರೆ ಬೇರೆ ವಿಚಾರಗಳ ವಿವರಣೆಯನ್ನು ಗ್ರಹಿಸುವುದು.
- ಇತಿಹಾಸಕಾರರ ಮತ್ತು ಕಾದಂಬರಿಕಾರರ ಬರವಣಿಗೆಯ ಪ್ರಕಾರಗಳಲ್ಲಿ ಕಂಡು ಬರುವ ವ್ಯತ್ಯಾಸಗಳನ್ನು ಗುರುತಿಸುವುದು.
- ಕಾದಂಬರಿಗಳ ರಚನೆಯ ಸಂದರ್ಭದಲ್ಲಿ, ಬರಹಗಾರನ ಮನಸ್ಥಿತಿಯು ಗ್ರಹಿಕೆ.

ಈ ಅಧ್ಯಯನವು ಮೇಲಿನ ಉದ್ದೇಶಗಳ ಜೊತೆಗೆ ಕನ್ನಡ ಸಾಹಿತ್ಯ ಲೋಕದಲ್ಲಿ ಹೊರಬಂದ, ಮುಸ್ಲಿಂ ಕಾದಂಬರಿಕಾರರ, ಕಾದಂಬರಿಯ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ. ಮತು ಅಧ್ಯಯನಕ್ಕೆ ಮುಸ್ಲಿಂ ಬರಹಗಾರರ, ಕಾದಂಬರಿಗಳನ್ನೇ ಹೆಚ್ಚಿಗೆ ಆಕರಗಳಾಗಿ ಆಯ್ಕೆ ಮಾಡಿಕೊಳ್ಳಲಿದೆ.

ಕರಾವಳಿ ಕರ್ನಾಟಕದ ಮುಸ್ಲಿಂ ಬರಹಗಾರರ ಕಾದಂಬರಿ–ಕಥನ ಸಾಹಿತ್ಯದಲ್ಲಿ ಸಮಾಜ ಮತ್ತು ಸಂಸ್ಕೃತಿ ಎಂಬ ಈ ಅಧ್ಯಯನದಲ್ಲಿ, ಕಾದಂಬರಿಗಳಲ್ಲಿ ಅಡಕವಾಗಿರುವ ಮುಸ್ಲಿಂ ಸಮುದಾಯಕ್ಕೆ ಸಂಬಂಧಪಟ್ಟ ಎಲ್ಲಾ ವಿಚಾರಗಳನ್ನು ಚರ್ಚಿಸಲಾಗುತ್ತದೆ. ಯಾವುದೇ ಕಾಲದ ಮಿತಿಯನ್ನು ಹಾಕಿಕೊಂಡಿಲ್ಲ. ಕಾರಣ, ಕಾದಂಬರಿಕಾರರು, ತಮ್ಮ ಬರವಣೆಗೆಯಲ್ಲಿ ಬೇರೆ ಬೇರೆ ಕಾಲಕ್ಕೆ ಸಂಬಂಧಪಟ್ಟ ವಿಚಾರಗಳನ್ನು ವಸ್ತು ವಿಷಯವಾಗಿ ಆಯ್ಕೆಮಾಡಿಕೊಂಡಿರುತ್ತಾರೆ. ಮುಸ್ಲಿಂ ಸಮುದಾಯ ಎಂದಾಗ ಕಾಲದಿಂದ ಕಾಲಕ್ಕೆ, ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ, ಸಾಂಸ್ಕೃತಿಕ ಭಿನ್ನತೆಯನ್ನು ಹೊಂದಿದೆ. ಹಾಗಾಗಿ, ಈ ಅಧ್ಯಯನವು ಯಾವುದೇ ಕಾಲದ ಮಿತಿಯನ್ನು ಹಾಕಿಕೊಂಡಿರುವುದಿಲ್ಲ. ಆದರೆ, ಹೆಚ್ಚಾಗಿ ಆಧುನಿಕ ಕಾಲಕ್ಕೆ ಒತ್ತನ್ನು ನೀಡಲಾಗುತ್ತದೆ. ಅದರೊಂದಿಗೆ ಅಧ್ಯಯನದ ದೃಷ್ಟಿಯಿಂದ ಕರಾವಳಿ ಕರ್ನಾಟಕ ಎಂಬ ಪ್ರದೇಶದ ಮಿತಿಯನ್ನು ಹಾಕಿಕೊಂಡರೂ, ಕೆಲವೊಂದು ಕಾದಂಬರಿಗಳು, ಇಸ್ಲಾಂ ಧರ್ಮದ ಬಗೆಗಿನ ಬೇರೆ ಬೇರೆ ವಿಚಾರಗಳನ್ನು ಮಂಡಿಸುವ ಸಂದರ್ಭದಲ್ಲಿ, ಅಂತರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯನ್ನು ನಡೆಸಿದರೆ, ಮತ್ತೇ ಕೆಲವೊಮ್ಮೆ ಪ್ರಾದೇಶಿಕ ಮಟ್ಟದಲ್ಲಿ ಚರ್ಚೆಯನ್ನು ನಡೆಸುತ್ತದೆ.

ಈ ಅಧ್ಯಯನದಲ್ಲಿ ಕನ್ನಡ ಸಾಹಿತ್ಯದಲ್ಲಿ ಲಭ್ಯವಿರುವ ಮುಸ್ಲಿಂ ಸಮುದಾಯದ ಬಗೆಗಿನ ಕಾದಂಬರಿಗಳ ಪರಾಮರ್ಶನೆಯತ್ತ ಗಮನವಹಿಸಿದರೂ ಕೂಡ ಅಧ್ಯಯನದ ದೃಷ್ಟಿಯಿಂದ ಹೆಚ್ಚಾಗಿ ಮುಸ್ಲಿಂ ಬರಹಗಾರರ ಕಾದಂಬರಿಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಲಾಗುತ್ತದೆ. ಎಲ್ಲಾ ವಿಚಾರಗಳನ್ನು ಚರ್ಚಿಸಲು ಕಾದಂಬರಿಗಳಲ್ಲಿ ದೊರೆಯುವ ವಿಷಯಗಳನ್ನು ಪರಾಮರ್ಶನಕ್ಕೆ ಒಳಪಡಿಸಲಾಗಿದೆ.

ಆಕರಗಳು

ಈ ಅಧ್ಯಯನವು ಪ್ರಮುಖವಾಗಿ ಅನುಷಂಗಿಕವಾದ ಆಕರಗಳನ್ನು ಹೆಚ್ಚಾಗಿ ತನ್ನ ಆಕರವನ್ನಾಗಿ ಬಳಸಿಕೊಳ್ಳಲಿದೆ. ಇದರೊಂದಿಗೆ ಕೆಲವೊಂದು ಐತಿಹಾಸಿಕ ಘಟನೆಗಳ ವಿವರಗಳನ್ನು ನೀಡುವ ಸಂದರ್ಭದಲ್ಲಿ ಇತಿಹಾಸಕ್ಕೆ ಸಂಬಂಧಪಟ್ಟ ಬರಹಗಳನ್ನೂ ಸಹ ಆಕರಗಳಾಗಿ ಬಳಸಿಕೊಳ್ಳಲಿದೆ. ಒಟ್ಟಾರೆಯಾಗಿ ಇಡೀ ಅಧ್ಯಯನವು ಅನುಷಂಗಿಕ ಅಕರಗಳನ್ನೇ ಹೆಚ್ಚಾಗಿ ಅವಲಂಬಿಸಲಿದೆ. ಅನುಷಂಗಿಕ ಆಕರಗಳು ಬರವಣಿಗೆಯಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸಲಿದೆ. ಅಧ್ಯಯನವು ಕಾದಂಬರಿಗಳ ಪರಾಮರ್ಶನದ ಮೂಲಕವೇ ನಡೆಯಲಿದೆ. ತೌಲನಿಕ ಅಧ್ಯಯನವನ್ನು ನಡೆಸುವಂತಹ ಸಂದರ್ಭದಲ್ಲಿ ಪ್ರಾಥಮಿಕ ಅಕರಗಳಾದ ಕುರಾನ್ ಮತ್ತು ಹದೀಸ್‌ಗಳನ್ನು ಕೂಡ ಅಕರಗಳಾಗಿ ಬಳಸಿಕೊಳ್ಳಲಿದೆ. ಇದರೊಂದಿಗೆ ಹೆಚ್ಚಿನ ವಿವರಗಳನ್ನು ಪಡೆಯುವ ಸಲುವಾಗಿ ಬೇರೆ ಬೇರೆ ಕಾದಂಬರಿಕಾರರ ಸಂದರ್ಶನವನ್ನು ನಡೆಸಲಾಗುತ್ತದೆ.

ಅಧ್ಯಯನಕ್ಕೆ ಸಂಬಂಧಪಟ್ಟ ಆಕರಗಳನ್ನು ವಿವಿಧ ಗ್ರಂಥಾಲಯಗಳಿಂದ ಸಂಗ್ರಹಿಸಬಹುದಾಗಿದೆ. ಕೆಲವೊಂದು ಪ್ರಮುಖವಾದ ಕೃತಿಗಳು, ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥಾಲಯದಿಂದ ಸಂಗ್ರಹಿಸಲಾಗಿದೆ. ಮತ್ತು ಕೆಲವೊಂದು ಆಕರಗಳನ್ನು ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ಇಲ್ಲಿಯ ಗ್ರಂಥಾಲಯದಿಂದ ಸಂಗ್ರಹಿಸಿದೆ. ಇನ್ನೂ ಕೆಲವು ಕೃತಿಗಳನ್ನು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ, ಸ್ಟಂಟ್ ಅಲೋಶಿಯಸ್ ಕಾಲೇಜು ಗ್ರಂಥಾಲಯ, ಮಂಗಳೂರು: ಇಲ್ಲಿಂದ ಸಂಗ್ರಹಿಸಲಾಗಿದೆ. ಅಧ್ಯಯನಕ್ಕೆ ಸಂಬಂಧಪಟ್ಟ ಕೆಲವೊಂದು ಆಕರಗಳನ್ನು ಅಥವಾ ಕಾದಂಬರಿಗಳನ್ನು ಕರ್ನಾಟಕ ಥಿಯೊಸಾಫಿಕಲ್ ಸೆಂಟರ್, ಹಂಪನಕಟ್ಟೆ, ಮಂಗಳೂರು, ಇಲ್ಲಿಂದ ಸಂಗ್ರಹಿಸಿದರೆ, ಮತ್ತಷ್ಟು ಕಾದಂಬರಿಗಳನ್ನು ಗೋವಿಂದ ಪೈ, ಸಂಶೋಧನಾ ಕೇಂದ್ರ ಉಡುಪಿಯಿಂದ ಸಂಗ್ರಹಿಸಲಾಗಿದೆ.

ವಿಧಾನ

ಕರಾವಳಿ ಕರ್ನಾಟಕದ ಮುಸ್ಲಿಂ ಬರಹಗಾರರ ಕಾದಂಬರಿ–ಕಥನ ಸಾಹಿತ್ಯದಲ್ಲಿ ಸಮಾಜ ಮತ್ತು ಸಂಸ್ಕೃತಿ ಎಂಬ ಅಧ್ಯಯನವನ್ನು ಕೈಗೊಳ್ಳಲು ಐತಿಹಾಸಿಕವಾದ ಮತ್ತು ವಿಶ್ಲೇಷಣಾತ್ಮಕವಾದ ವಿಧಾನವನ್ನು ಅನುಸರಿಸಬೇಕಾಗುತ್ತದೆ. ಅಧ್ಯಯನವು ಇಡೀ ಮುಸ್ಲಿಂ ಸಮುದಾಯದಲ್ಲಿ ಬರುವ ಎಲ್ಲಾ ಅಂಶಗಳಿಗೆ ಒತ್ತು ನೀಡಿರುವುದರಿಂದ, ಶ್ರೇಷ್ಟ ಬರಹಗಾರರ ಕಾದಂಬರಿಗಳನ್ನು ಮಾತ್ರವೇ ಆಯ್ಕೆ ಮಾಡಿಕೊಳ್ಳಲಾಗಿದೆ. ಅಧ್ಯಯನಕ್ಕಾಗಿ ಗ್ರಂಥಗಳ ಪರಾಮರ್ಶನಾ ವಿಧಾನವನ್ನೇ ಹೆಚ್ಚಾಗಿ ಅವಲಂಬಿಸಲಾಗಿದೆ. ಇದರೊಂದಿಗೆ ಅಧ್ಯಯನಕ್ಕೆ ಸಂಬಂಧಪಟ್ಟ ಗ್ರಂಥಗಳನ್ನು (ಕಾದಂಬರಿ) ರಚಿಸಿದ, ಬರಹಗಾರರನ್ನು ಮುಖತಃ ಭೇಟಿಮಾಡಿ, ಪ್ರಶ್ನಾವಳಿಗಳೊಂದಿಗೆ ಸಂದರ್ಶನ ನಡೆಸಿ ಕೃತಿಯ ಬಗೆಗೆ

ಹೆಚ್ಚಿನ ಮಾಹಿತಿಯನ್ನು ಪಡೆದು, ಬರಹಗಾರರ ಅಭಿಪ್ರಾಯವನ್ನು ಕೂಡ ಸಂಗ್ರಹಿಸಲಾಗುತ್ತದೆ. ಇದು ಅಧ್ಯಯನಕ್ಕೆ ಪ್ರಾಥಮಿಕ ಆಕರವಾಗುತ್ತದೆ.

ಮುಸ್ಲಿಂ ಮಹಿಳೆ ಸಮಾಜದಲ್ಲಿ ಶೋಷಿತಗಳಾಗಿ, ಆ ಶೋಷಣೆಯಿಂದ ಹೊರಬರಲು ನಡೆಸುವ ಹೋರಾಟ, ಮುಸ್ಲಿಮೇತರ ಸಮುದಾಯದೊಂದಿಗೆ ಮುಸ್ಲಿಂರ ಕೂಡು ಜೀವನ, ಇವೆಲ್ಲವೂಗಳ ಚರ್ಚೆಯನ್ನು ಕಾದಂಬರಿಗಳ ಪರಾಮರ್ಶನೆ ನಡೆಸುವ ಮೂಲಕವೇ ವಿಷಯನ್ನು ಸಂಗ್ರಹಿಸಬೇಕಾಗುತ್ತದೆ. ಕೆಲವೊಂದು ಮುಸ್ಲಿಂ ಸಮುದಾಯದ ಚಾರಿತ್ರಿಕ ವಿಚಾರಗಳ ತೌಲನಿಕ ಚರ್ಚೆಯನ್ನು ನಡೆಸುವಾಗ, ಮುಸ್ಲಿಂ ಸಮಾಜದ ಪವಿತ್ರ ಗ್ರಂಥವಾದ ಕುರಾನ್, ಮತ್ತು ಹದೀಸ್‌ಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಇವು ಅಧ್ಯಯನಕ್ಕೆ ಪ್ರಾಥಮಿಕ ಆಕರವಾಗಿ ಲಭ್ಯವಾಗಲಿದೆ.

ಅಧ್ಯಾಯಗಳು

ಈ ಅಧ್ಯಯನವು ಒಟ್ಟಾರೆಯಾಗಿ, ಕನ್ನಡ ಕಾದಂಬರಿಗಳಲ್ಲಿ ವ್ಯಕ್ತವಾಗಿರುವ ಮುಸ್ಲಿಂ ಅಸ್ಮಿತೆಯ ಹುಡುಕಾಟದ ಉದ್ಧೇಶವನ್ನು ಹೊಂದಿದೆ. ಈ ಅಧ್ಯಯನವನ್ನು ಒಟ್ಟು ಆರು ಅಧ್ಯಾಯಗಳಲ್ಲಿ ವಿಭಾಗಿಸಲಾಗಿದೆ.

ಮೊದಲನೇ ಅಧ್ಯಾಯ: ಪೀಠಿಕೆ

ಮೊದಲನೇ ಅಧ್ಯಾಯದಲ್ಲಿ, ಅಧ್ಯಯನದ ಬಗೆಗಿನ ನಿರೂಪಣೆ, ಅಧ್ಯಯನದ ಉದ್ದೇಶಗಳು, ವ್ಯಾಪ್ತಿಯನ್ನು ಕುರಿತು ವಿವರಣೆಯನ್ನು ನೀಡುವುದರೊಂದಿಗೆ, ಅಧ್ಯಯನಕ್ಕೆ ಉಪಯುಕ್ತವಾದ ಆಕರಗಳ ವಿವರಣೆ, ಐತಿಹಾಸಿಕ ಬರವಣಿಗೆಗಳ ಸಮೀಕ್ಷೆ, ಅಧ್ಯಯನದ ವಿಧಾನದ ಕುರಿತು ವಿವರವನ್ನು ತಿಳಿಸುತ್ತದೆ. ಕೊನೆಯದಾಗಿ ಅಧ್ಯಯನವನ್ನು ಎಷ್ಟು ಭಾಗಗಳಾಗಿ ವಿಂಗಡಿಸಲಾಗಿದೆ ಎಂಬುಬುದನ್ನು ಚರ್ಚಿಸುತ್ತದೆ.

ಎರಡನೇ ಅಧ್ಯಾಯ: ಇತಿಹಾಸದ ಮೂಲವಾಗಿ ಸಾಹಿತ್ಯ

ಈ ಅಧ್ಯಾಯದಲ್ಲಿ ಒಟ್ಟಾರೆ ಕನ್ನಡ ಕಾದಂಬರಿಗಳು ಹೇಗೆ ಇತಿಹಾಸ ರಚನೆಯನ್ನು ಸಹಾಯಮಾಡುತ್ತವೆ ಎಂಬ ವಿಚಾರವನ್ನು ವಿವರಿಸುತ್ತದೆ. ಇತಿಹಾಸ ಮತ್ತು ಸಾಹಿತ್ಯ ನಡುವೆ ಎರಡು ವಿಭಾಗಗಳಲ್ಲಿ ಸಂಧಿಸುತ್ತದೆ. ಮೊದಲನೇಯದು ಸಾಮಾಜಿಕ ಪ್ರಕ್ರಿಯೆಯಲ್ಲಿ ಬಹುಮುಖ್ಯ ಭಾಗವಾಗಿ ಸಂಧಿಸಿದರೆ, ಎರಡನೇಯದಾಗಿ ಇತಿಹಾಸದ ನಿಜವಾದ ವಿವರಣೆಯ ಜೊತೆಗೆ ಸಾಹಿತ್ಯ ಮತ್ತು ಕಲೆಯ ತಯಾರಿಯಲ್ಲಿ. ಸಾಹಿತ್ಯ ಮತ್ತು ಇತಿಹಾಸದ ಪರಸ್ಪರ ಪುಷ್ಟೀಕರಣವೆಂದರೆ ವಿವರಣೆಯ ರೀತಿ ಬೇರೆ ಬೇರೆಯಾಗಿದ್ದರೂ ಅದರ ಫಲಿತಾಂಶ ಅಂದರೆ ವಿವರಿಸುವ ವಿಷಯ ಒಂದೇ ಆಗಿದೆ. ಇತಿಹಾಸವು

ಸಾಹಿತ್ಯದ ಸ್ಪೂರ್ತಿ ಮತ್ತು ಆಧಾರವಾಗಿದೆ. ಕೆಲವೊಂದು ಕಾದಂಬರಿಗಳಲ್ಲಿ 'ಐತಿಹಾಸಿಕ ಕಾದಂಬರಿ' ಎನ್ನುವ ಅಡಿಬರಹವನ್ನು ಕಾಣುತ್ತೇವೆ. ಇದು ತಪ್ಪು ತಿಳುವಳಿಕೆಯಾಗಿದೆ. ಇತಿಹಾಸವನ್ನು ಹೊರತುಪಡಿಸಿ ಸಾಹಿತ್ಯವಿಲ್ಲ. ನಿರ್ದಿಷ್ಟವಾದ ಬರಹದಲ್ಲಿ ಅಥವಾ ಸಾಹಿತ್ಯದ ಅಂಗದಲ್ಲೇ ಬರೆತಿರುವ ಸಮಾಜದ ಬಗೆಗಿನ ವಿವರಣೆ ಇತ್ತೀಚಿನ ಇತಿಹಾಸದ ಸಂಶೋಧನೆಗೆ ಬಹುಮುಖ್ಯವಾದ ಆಯ್ಕೆಯ ವಿಷಯವಾಗಿದೆ. ಹಾಗೆಯೇ ಇವರು ಸಾಮಾಜಿಕ ವಿವರಣೆಗಳನ್ನು ಪಡೆಯಲು ಸಾಹಿತ್ಯಕ್ಕೆ ಹೆಚ್ಚು ಅವಲಂಬಿತರಾಗುತ್ತಾರೆ. ಇತಿಹಾಸ ಮತ್ತು ಸಾಹಿತ್ಯದ ನಡುವಿನ ಈ ಅಂತರ್ ಸಂಬಂಧಕ್ಕೆ ಬಹುಮುಖ್ಯವಾದ ಕಾರಣವೆಂದರೆ ಇವೆರಡೂ ಕೂಡ ಸಾಮಾಜಿಕ ಪ್ರಕ್ರಿಯೆಯಲ್ಲಿ ನೇರವಾಗಿ ಭಾಗವಹಿಸಿರುವುದು.

ಮೂರನೇ ಅಧ್ಯಾಯ: ಆಧುನೀಕರಣದ ಪ್ರತೀಕವಾದ ಸಾಹಿತ್ಯಗಳು

ಕನ್ನಡ ಸಾಹಿತ್ಯ ಲೋಕದಲ್ಲಿ ಹಲವಾರು ಕಾದಂಬರಿಗಳು ರಚನೆಯಾಗಿವೆ ಆದರೆ ಕೆಲವೇ ಕೆಲವು ಕಾದಂಬರಿಗಳು ಮಾತ್ರ ಮುಸ್ಲಿಂ ಸಮಾಜ ಮತ್ತು ಸಮುದಾಯದಲ್ಲಿ ಸ್ವೀಕರಿಸಲ್ಪಟ್ಟ ಆಧುನಿಕ ವಿಚಾರಗಳನ್ನು ಕುರಿತು ತಿಳಿಸುತ್ತದೆ. ಮುಸ್ಲಿಂ ಸಮುದಾಯವು ತನ್ನ ಆಚರಣೆ ಮತ್ತು ಕಟ್ಟುಪಾಡುಗಳಲ್ಲಿ ಯಾವುದೇ ಆಧುನಿಕರಣವನ್ನು ಅಳವಡಿಸಿಕೊಳ್ಳದೆ ತನ್ನ ನೈಜ ಸಂಸ್ಕೃತಿಯನ್ನು ಕಾಪಾಡಿಕೊಂಡು, ಇತರ ಕೆಲವೊಂದು ವಿಚಾರಗಳಲ್ಲಿ ಆಧುನಿಕ ವಿಚಾರಧಾರೆಗಳಿಗೆ ತನ್ನನ್ನು ತಾನು ಹೇಗೆ ಒಗ್ಗಿಸಿಕೊಂಡಿತು ಎಂಬ ವಿಚಾರಗಳನ್ನು ಇಲ್ಲಿ ಚರ್ಚಿಸುಲಾಗುತ್ತದೆ. ಕನ್ನಡ ಸಾಹಿತ್ಯ ಲೋಕದಲ್ಲಿ ಬೆರಳೆಣಿಕೆಯಷ್ಟು ಮುಸ್ಲಿಂ ಬರಹಗಾರರು ಬರವಣಿಗೆಯಲ್ಲಿ ತೊಡಗಿಕೊಂಡವರಾದರೂ ಇವರ ಬರವಣಿಗೆಯಲ್ಲಿ ಸಾಕಷ್ಟು ಆಧುನೀಕರಣದ ವಿಚಾರಗಳ ಪಾಲ್ಗೊಳ್ಳುವಿಕೆಯನ್ನು ಕಾಣಬಹುದಾಗಿದೆ.

ನಾಲ್ಕನೇಯ ಅಧ್ಯಾಯ: ಸಾಹಿತ್ಯದಲ್ಲಿ ಪ್ರತಿಬಿಂಭಿತವಾದ ಐತಿಹಾಸಿಕ ಸಾಮಾಜಿಕ ಬದಲಾವಣೆಗಳು

ಕಾದಂಬರಿಗಳು, ಮುಸ್ಲಿಂ ಸಮುದಾಯದ ಕುರಿತು ಚರ್ಚಿಸುತ್ತಾ ಸಾಗುವಾಗ ಅನೇಕ ಮುಸ್ಲಿಮೇತರ ಸಮಾಜದ ವಿವರಣೆಯನ್ನು ನೀಡುತ್ತಾರೆ. ಅಂತಹ ಕಾದಂಬರಿಗಳನ್ನು ಅಧ್ಯಯನಕೊಳ್ಳಪಡಿಸಿ, ಅದರಲ್ಲಿ ಅಡಕವಾಗಿರುವ ಸಾಮಾಜಿಕ ಅಂಶಗಳನ್ನು ಅವಲೋಕನ ಮಾಡಲಾಗಿದೆ. ಸಮಾಜದಲ್ಲಿ ಇತರ ಸಮುದಾಯದೊಂದಿಗೆ ಬೆರೆತು ಮುಸ್ಲಿಂ ಸಮುದಾಯ ಹೇಗೆ ಒಂದು ಹೊಸ ಸಂಸ್ಕೃತಿಯನ್ನು ಅಥವಾ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುತ್ತವೆ ಎನ್ನುವುದರ ಕುರಿತು ಅವಲೋಕನವನ್ನು ನಡೆಸಲಾಗುತ್ತದೆ. ಬೇರೆ ಬೇರೆ ಕಾದಂಬರಿಕಾರರು ತಮ್ಮ ಬರಹಗಳಲ್ಲಿ ವಿವಿಧ ರೀತಿಯಲ್ಲಿ ಸಮುದಾಯದೊಳಗಿನ ಐತಿಹಾಸಿಕ ಮತ್ತು ಸಾಮಾಜಿಕ ಬದಲಾವಣೆಗಳನ್ನು ವಿವರಿಸಿದ್ದಾರೆ. ಈ ಎಲ್ಲಾ ವಿಚಾರಗಳನ್ನು ಅಧ್ಯಯನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.

ಐದನೇಯ ಅಧ್ಯಾಯ: ಆತ್ಮಚರಿತ್ರೆಯ ಸಾಹಿತ್ಯಗಳು

ಐದನೇಯ ಅಧ್ಯಾಯದಲ್ಲಿ ಆತ್ಮಚರಿತ್ರೆಯ ಸಾಹಿತ್ಯಗಳನ್ನು ಕುರಿತು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸಾಹಿತಿಗಳು ಬಹುತೇಕವಾಗಿ ಬರವಣಿಗೆಯನ್ನು ಆರಂಭಿಸುವ ಸಂದರ್ಭದಲ್ಲಿ ತಮ್ಮ ಜೀವನದಲ್ಲಿ ಅನುಭವಿಸಿದ, ಕಂಡ ವಿಚಾರಗಳನ್ನೇ ವಸ್ತುವಿಷಯವಾಗಿ ಆಯ್ಕೆಮಾಡುಕೊಳ್ಳುತ್ತಾರೆ. ಈ ನಿಟ್ಟಿನಲ್ಲಿ ಅನೇಕ ಕೃತಿಗಳು ಕನ್ನಡ ಸಾಹಿತ್ಯ ಲೋಕದಲ್ಲಿ ಪ್ರಕಟಗೊಂಡಿವೆ. ಅವುಗಳ ಅ ಕಾಲಘಟ್ಟದ ವಿವಿಧ ವಿಚಾರಗಳ ಮಾಹಿತಿಯನ್ನು ಒದಗಿಸುತ್ತವೆ. ವಿಶೇಷವಾಗಿ ಸಾರಾ ಅಬೂಬಕ್ಕರ್, ಬೋಳುವಾರು ಮಹಮ್ಮದ್ ಕುಂಞ ಇವರ ಆತ್ಮಚರಿತ್ರೆಯ ಸಾಹಿತ್ಯಗಳ ಕಡೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನವನ್ನು ಮಾಡಲಾಗಿದೆ.

ಆರನೇಯ ಅಧ್ಯಾಯ: ಉಪಸಂಹಾರ

ಮೇಲಿನ ಎಲ್ಲಾ ಅಧ್ಯಾಯಗಳ, ಅಧ್ಯಯನದ ಕೊನೆಯಲ್ಲಿ ಕಂಡುಕೊಂಡ ಸತ್ಯಗಳ ಒಟ್ಟು ವಿವರಣೆಯನ್ನು ಕೊನೆಯ ಮತ್ತು ಆರನೇಯ ಅಧ್ಯಾಯದಲ್ಲಿ ತಿಳಿಸಲಾಗುತ್ತದೆ. ಒಂದು ಕಾದಂಬರಿಗಳೂ ಕೂಡ ಒಂದು ಸಮುದಾಯದ ಆಸ್ಮಿತೆಯೆ ಬಗೆಗೆ, ಮಾತ್ರವಲ್ಲದೆ. ಇತಿಹಾಸ, ಸಮಾಜ, ಧಾರ್ಮಿಕ ಜೀವನದ ಬಗೆಗೆ ವಿವರಣೆಯನ್ನು ನೀಡಬಲ್ಲರು ಎಂಬುವುದರನ್ನು ಮೇಲಿನ ಅಧ್ಯಾಯಗಳಲ್ಲಿ ನಿರೂಪಿಸಿ, ಉಪಸಂಹಾರದಲ್ಲಿ ಕಂಡುಕೊಂಡ ಸತ್ಯವನ್ನು ನಿರೂಪಿಸಲಾಗುತ್ತದೆ.

ಬರವಣಿಗೆಗಳ ಸಮೀಕ್ಷೆ

ಅನುಷಂಗಿಕ ಅಕರಗಳು, ಅಧ್ಯಯನದ ದೃಷ್ಟಿಯಿಂದ ವ್ಯಾಪಕವಾದ ಮಾಹಿತಿಯನ್ನು ನೀಡುವುದರೊಂದಿಗೆ, ಬಹಳ ಉಪಯುಕ್ತವಾಗಿದೆ. ವಸಹಾತುಶಾಹಿ ಬರಹಗಾರರಾದ ಜೆ. ಸ್ಟರಕ್ ಮತ್ತು ಸ್ಟುವರ್ಟ್ ರವರ ಮದ್ರಸ್ ಡಿಸ್ಟ್ರಿಕ್ಟ್ ಮ್ಯಾನ್ಯುವಲ್ ಇದರೊಂದಿಗೆ ಫ್ರಾನ್ಸಿಸ್ ಬುಕನಾನ್‌ನ ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರಾ ಎಂಡ್ ಮಲಬಾರ್ (ಮೂರು ಸಂಪುಟಗಳು) ಈ ದಾಖಲೆಗಳನ್ನು ಆಧರಿಸಿ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಸಮುದಾಯಗಳ ವಿಚಾರಗಳನ್ನು ಸೂಕ್ಷ್ಮವಾಗಿ ಅವಲೋಕನ ಮಾಡಲು ಸಾಧ್ಯವಾಗುತ್ತದೆ. 19ನೇಯ ಶತಮಾನದ ಕೊನೆಯ ದಶಕದಲ್ಲಿ ಪ್ರಕಟವಾದ ಎರಡು ಅಮೂಲ್ಯ ಸಂಪುಟಗಳು ತುಳುನಾಡಿನ ಚರಿತ್ರೆ ಕಥನದಲ್ಲಿ ಮತ್ತೊಂದು ಮೈಲಿಗಲ್ಲಾಗಿದೆ. ಸೌತ್ ಕೆನರಾದ ಮೊದಲ ಕಲೆಕ್ಟರ್ ಥಾಮಸ್ ಮನ್ರೋರವರ ವರದಿಯನ್ನು ಜೆ. ಸ್ಟರಕ್ ಮತ್ತು ಸ್ಟುವರ್ಟ್ ರಚಿಸಿರುವ 'ಮದ್ರಾಸ್ ಡಿಸ್ಟ್ರಿಕ್ಟ್ ಮ್ಯಾನ್ಯುವಲ್' ಎಂಬ ಶೀರ್ಷಿಕೆಯಡಿಯಲ್ಲಿ ಎರಡು ಸಂಪುಟದಲ್ಲಿ 1894ರಲ್ಲಿ ಪ್ರಕಟವಾದವು. ಈ ವರದಿಯು ಮುಸ್ಲಿಂ

ಸಮುದಾಯದ ವೃತ್ತಿ, ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆಯನ್ನು ಧರ್ಮ ಮತ್ತು ತಾಲೂಕುಗಳ ಆಧಾರಗಳಲ್ಲಿ ವಿಭಾಗಗಳಾಗಿ ವಿಂಗಡಿಸಿ ಮಾಹಿತಿಯನ್ನು ನೀಡಿದ್ದಾರೆ. ಹಾಗೂ ಈ ಪ್ರಾಂತ್ಯದ ಇತರ ವಿಚಾರಗಳ ಕುರಿತಾಗಿಯೂ ಚರ್ಚೆಯನ್ನು ಕಾಣಬಹುದು. ಇವೆರಡೂ ಗ್ರಂಥಗಳಲ್ಲಿರುವ ವಾಸ್ತವಿಕ ಅಂಶಗಳು ತುಳುನಾಡಿನ ಎಲ್ಲಾ ಸಮುದಾಯಗಳ ಇತಿಹಾಸ ಮತ್ತು ಸಂಸ್ಕೃತಿ ರಚನೆಗೆ ಮೌಲ್ಯಾಧಾರಿತ ಗ್ರಂಥಗಳಾಗಿವೆ. ಎಚ್.ಎ.ಫ್ರಾನ್ಸಿಸ್ ಬುಕಾನಾನ್‌ರವರ 'ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರಾ ಎಂಡ್ ಮಲಬಾರ್ (ಮೂರು ಸಂಪುಟಗಳು) ಕೃತಿಯಲ್ಲಿ ತುಳುನಾಡಿನ ಸ್ಥಳೀಯ ಪ್ರದೇಶಗಳ ಸಂಕ್ಷಿಪ್ತವಾದ ವಿವರಣೆಯೊಂದಿಗೆ ಪ್ರದೇಶಗಳಿಗೆ ಹೊಂದಿಕೊಂಡಿರುವ ಸಂಸ್ಕೃತಿ ಹಾಗೂ ಇತಿಹಾಸದ ವಿವರಣೆಯನ್ನೂ ಬುಕನಾನನ್ ನೀಡುತ್ತಾನೆ.

ಅವಿನಾಶ್. ಟಿ ಇವರ ಪೋಸ್ಟ್ ಮಾರ್ಡನಿಸಂ–ಟ್ರಾನ್ಸ್ ಕಲ್ಚರಲ್ ಸ್ಟಡಿ; ಅಶೋಕ ಕುಮಾರ ರವರ ಸಾಹಿತ್ಯ ಮತ್ತು ಇತಿಹಾಸದ ಸಂಬಂಧಗಳು ಸಂಸರ ನಾಟಕಗಳ ಮುಖೇನ; ಆರ್. ಸಿ. ದೇವರಾಜು ರವರ ಕನ್ನಡ ಜನಪದ ಸಾಹಿತ್ಯದಲ್ಲಿ ಐತಿಹಾಸಿಕ ಅಂಶಗಳು ಎಂಬ ಇತ್ಯಾದಿ ಮಹಾಪ್ರಬಂಧಗಳಲ್ಲಿ ದಕ್ಷಿಣ ಕನ್ನಡದ ವಿವಿಧ ವಿಚಾರಗಳ ಬಗೆಗೆ ಮಾಹಿತಿಯನ್ನು ಒಳಗೊಂಡಿದ್ದು, ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ನೀಡುತ್ತದೆ. 'ಚಾರಿತ್ರಿಕ ಮಹಿಳೆಯನ್ನು ಕುರಿತು ಕನ್ನಡ ಕಾದಂಬರಿಗಳು' ಎಂಬ ಪಿ.ಹೆಚ್.ಡಿ. ಮಹಾಪ್ರಬಂಧವನ್ನು ಮೋಮಿನ್ ಎಸ್.ಎಂ ಅವರು ರಚಿಸಿದ್ದಾರೆ.ಇದು ಮುಸ್ಲಿಂ ಸಮುದಾಯದ ಚಾರಿತ್ರಿಕ ಮಹಿಳೆಯರ ವಿವರಗಳನ್ನು ನೀಡುವುದರ ಜೊತೆಗೆ ಮುಸ್ಲಿಂ ಸಮಾಜದಲ್ಲಿ ಮಹಿಳೆಯರು ಯಾವ ರೀತಿಯ ಪ್ರಭಾವವನ್ನು ಬೀರಿದ್ದಾರೆ, ಎಂಬುವುದರ ಕುರಿತು, ವಿಮರ್ಶಾತ್ಮಕವಾಗಿ ವಿಶ್ಲೇಷಣೆಯನ್ನು ನೀಡುತ್ತದೆ.ಒಟ್ಟಾರೆಯಾಗಿ ಈ ಮಹಾಪ್ರಬಂಧವು ಅಧ್ಯಯನದ ನೆಲೆಯಲ್ಲಿ ಪ್ರಮುಖವಾದ ಆಕರವಾಗಿದೆ. ಕವಿತಾ. ಬಿ.ಯವರು 'ಸಾರಾ ಅಬೂಬಕ್ಕರ್ ಕಥನ ಸಾಹಿತ್ಯದಲ್ಲಿ ಸಾಮಾಜಿಕ ವಿನ್ಯಾಸ'ಎಂಬ ಎಮ್.ಫಿಲ್ ಪ್ರಬಂಧವೂ ಮುಸ್ಲಿಂ ಸಮಾಜದ ಕುರಿತು ಚರ್ಚೆಯನ್ನು ನಡೆಸುತ್ತದೆ.ಸಾರಾ ಅಬೂಬಕ್ಕರ್ ಅವರ ಕೃತಿಗಳನ್ನು ಆಧಾರವಾಗಿರಿಸಿಕೊಂಡು ಈ ಪ್ರಬಂಧವು ತನ್ನ ಅಧ್ಯಯನವನ್ನು ಕೈಗೊಂಡಿದೆ.ಈ ಅಧ್ಯಯನದಲ್ಲಿ ಸಾರಾ ಅಬೂಬಕ್ಕರ್ ಅವರ ಕಥನ ಸಾಹಿತ್ಯದಲ್ಲಿ ಮುಸ್ಲಿಂ ಸಮಾಜ, ಮಹಿಳಾ ಪ್ರಶ್ನೆ ಮತ್ತು ಹಿಂದೂ–ಮುಸ್ಲಿಂ ಸಾಮಾಜಿಕ ಸಂಬಂಧಗಳು ಎಂಬ ಅಧ್ಯಾಯಗಳೊಂದಿಗೆ ಅಳವಾದ ಅಧ್ಯಯನವನ್ನು ನಡೆಸಿದೆ.ಹಾಗಾಗಿ ಇಲ್ಲಿ ಮುಸ್ಲಿಂ ಸಮಾಜದ ವಿವರಣೆಗಳು ಅಡಕವಾಗಿರುವುದರಿಂದ ಇದು ಅಧ್ಯಯನಕ್ಕೆ ಹೆಚ್ಚಿನ ಮಾಹಿತಿಯನ್ನು ನೀಡಬಲ್ಲರು ಹಿಂದೂ–ಮುಸ್ಲಿಂ ಸಾಮಾಜಿಕ ಸಂಬಂಧಗಳು ಅಧ್ಯಯನಕ್ಕೆ ಬಹುಮುಖ್ಯವಾದ ಆಕರವಾಗಿದೆ.

ಡಾ. ಎನ್. ಇಸ್ಮಾಯಿಲ್ ಇವರ ಕನ್ನಡ ಸಾಹಿತ್ಯದಲ್ಲಿ ಪ್ರತಿಬಿಂಬಿತವಾದ ಇಸ್ಲಾಂ ಸಂಸ್ಕೃತಿ ಎಂಬ ಪಿ. ಎಚ್.ಡಿ ಮಹಾಪ್ರಬಂಧವು(ಪ್ರಕಟಿತ) ಹೊಸಗನ್ನಡ ಸಾಹಿತ್ಯದಲ್ಲಿ ಇಸ್ಲಾಮಿನ ಸಾಂಸ್ಕೃತಿಕ ಅಂಶಗಳ ಹುಡುಕಾಟವನ್ನು ಮಾಡಿದೆ. ಈ ಕೃತಿಯಲ್ಲಿ ಕರ್ನಾಟಕ ಮುಸ್ಲಿಮರ ಹಿನ್ನೆಲೆಯ ಜೊತೆಗೆ ಅವರ ರಾಜಕೀಯ, ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಹಿನ್ನೆಲೆಯ ಪರಿಪೂರ್ಣವಾದ ವಿವರಣೆಯನ್ನು ಕಾಣಬಹುದು. ವಸಾಹತು ಪೂರ್ವ ಮತ್ತು ವಸಾಹತು ಯುಗದಲ್ಲಿ ಮುಸ್ಲಿಮರ ಬೌದ್ಧಿಕ ಬೆಳವಣಿಗೆ ಮತ್ತು ಅವರ ಭಾಷಾ ಸಮಸ್ಯೆಗಳ ಬಗೆಗೆ ಅವಲೋಕನವನ್ನು ಮಾಡಿದ್ದಾರೆ. ಬಹಳ ಪ್ರಮುಖವಾಗಿ ಇಸ್ಲಾಂ ಪಂಥದ ಸ್ವಾತಂತ್ರ್ಯೋತ್ತರ ಲೇಖಕರ ವಿವಧ ಪ್ರಕಾರದ ಕೃತಿಗಳಲ್ಲಿ ಪ್ರಕಟವಾಗಿರುವ ಇಸ್ಲಾಂ ಸಂಸ್ಕೃತಿಯ ಭಿನ್ನ ನೆಲೆಗಳನ್ನು ವಿವರಿಸುವುದರೊಂದಿಗೆ ಮುಸ್ಲಿಮೇತರ ಲೇಖಕರ ಕಾದಂಬರಿಗಳಲ್ಲಿ ಅಭಿವ್ಯಕ್ತಿಗೊಂಡಿರುವ ಇಸ್ಲಾಂ ಸಂಸ್ಕೃತಿಯನ್ನು ಕೂಡ ಅಧ್ಯಯನಕ್ಕೆ ಒಳಪಡಿಸಿರುವುದು ಇಲ್ಲಿನ ವಿಶೇಷವಾಗಿದೆ. ಒಟ್ಟಿನಲ್ಲಿ ಈ ಕೃತಿಯು ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಒದಗಿಸುವ ಕಾರ್ಯವನ್ನು ಮಾಡುವುದರಿಂದ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಚಾರಿತ್ರಿಕ ಕಾಲದಿಂದ ಪೋರ್ಚುಗೀಸರ ಆಗಮನದವರೆಗೆ ತುಳುನಾಡನ್ನು ಆಳಿದ ಬಹುತೇಕ ಎಲ್ಲಾ ರಾಜಮನೆತನಗಳ ವಿವರಣೆಯನ್ನು ಗಣಪತಿ ರಾವ್ ಐಗಳ್‌ರವರ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ' ಎಂಬ ಕೃತಿಯಲ್ಲಿ ಕಾಣಬಹುದಾಗಿದೆ, ಅಲ್ಲದೆ ಇದರ ಹದಿನೇಳನೇಯ ಅಧ್ಯಾಯದಲ್ಲಿ ಮಹಮ್ಮದೀಯರ ಕುರಿತಾದ ಸ್ಥೂಲವಾದ ಚರ್ಚೆಯನ್ನೂ ನಡೆಸಿದ್ದಾರೆ.

20ನೇ ಶತಮಾನದ ಕೊನೆಭಾಗದಲ್ಲಿ ಪ್ರಕಟವಾದ ಅತ್ಯಂತ ಶ್ರೇಷ್ಠ ಕೃತಿ ಸೂರ್ಯನಾಥ್. ಯು. ಕಾಮತ್‌ರವರ ಕರ್ನಾಟಕ ಸ್ಟೇಟ್ ಗೆಜೇಟಿಯರ್. ಇದರಲ್ಲಿ ಕರ್ನಾಟಕಕ್ಕೆ ಇಸ್ಲಾಂ ಧರ್ಮ ಪ್ರವೇಶ ಮತ್ತು ಕರ್ನಾಟಕದ ವಿವಧ ಪ್ರದೇಶಗಳಿಗೆ ಹೇಗೆ ವಿಸ್ತಾರತೆಯನ್ನ ಪಡೆಯಿತು ಎಂಬುದರ ಕುರಿತು ವಿವರಿಸುತ್ತಾರೆ. ವಿವಿಧ ರಾಜಮನೆತನಗಳ ಆಶ್ರಯದಲ್ಲಿ ಇಸ್ಲಾಂ ಧರ್ಮದ ಬೆಳವಣಿಗೆ ಮತ್ತು ಕಾರ್ಯ ಚಟುವಟಿಕೆಗಳು, ಸಂಸ್ಕೃತಿಯ ವಿವಿಧತೆಯನ್ನು ಜೊತೆಗೆ ಸೂಫಿ ಸಂತರ ಪ್ರಭಾವವನ್ನು ಒಳಗೊಂಡತೆ ಅನೇಕ ವಿಚಾರಗಳನ್ನು ಈ ಕೃತಿಯಲ್ಲಿ ನೀಡಿದ್ದಾರೆ.

ಕರಾವಳಿ ಕರ್ನಾಟಕದ ಮುಸ್ಲಿಂ ಬರಹಗಾರರ ಕಾದಂಬರಿ–ಕಥನ ಸಾಹಿತ್ಯದಲ್ಲಿ ಸಮಾಜ ಮತ್ತು ಸಂಸ್ಕೃತಿ ಎಂಬ ಈ ಅಧ್ಯಯನದಲ್ಲಿ ಕನ್ನಡ ಕಾದಂಬರಿಗಳಲ್ಲಿ ಅಡಕವಾಗಿರುವ ಮುಸ್ಲಿಂ ಆಸ್ಮಿತೆಯ ವಿವಿಧ ಘಟ್ಟಗಳನ್ನು ಗಂಭೀರವಾಗಿ ಚರ್ಚಿಸುವ ಉದ್ದೇಶವನ್ನು ಹಾಕಿಕೊಂಡಿದೆ. ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಸಾಹಿತ್ಯಲೋಕವು ಪರಿವರ್ತನೆಗಳನ್ನು ಕಂಡಿದೆ.ಅರಸರುಗಳನ್ನು ಹೊಗಳಿ ಬರೆಯುವ ಸಾಹಿತ್ಯ ಪ್ರಕಾರದ ಜೊತೆಗೆ ವಚನಕಾರರ ಉದ್ದೇಶವೇ ಬೇರೆಯಾಗಿತ್ತು. ಮಾರ್ಕ್ಸ್‌ವಾದಿ ಮತ್ತು

ಸಬಾಲ್ಟರ್ನ್ ಬರಹಗಾರರು ಸಮಾಜದ ತಳಸಮುದಾಯದ, ಶೋಷಿತ ವರ್ಗದ ಜನರ ಬದುಕಿನ ಚಿತ್ರಣವನ್ನು ವಿವರಿಸಿದರೆ, ಆಧುನಿಕೋತ್ತರವಾದಿ ಚಿಂತಕರು, ಬೇರೆ ಬೇರೆ ಸಂಸ್ಕೃತಿಯ ಬಗೆಗೆ ಮತ್ತು ಅವುಗಳ ಸತ್ಯದ ಚರ್ಚೆಯನ್ನು, ಸಾಹಿತ್ಯ ಕೃತಿಗಳ ಮೂಲಕ ನಡೆಸುತ್ತದೆ. ಅದೇ ರೀತಿ ಆಧುನಿಕ ಸಮಾಜವು ಸ್ಥಾಪಿಸಿದ ದೃಷ್ಟಿಕೋನಗಳನ್ನು ಮತ್ತು ಅದರ ನ್ಯೂನ್ಯತೆಗಳನ್ನು ತಿರಸ್ಕರಿಸುತ್ತದೆ.ಈ ಅಧ್ಯಯನವು ಆಧುನೀಕೋತ್ತರವಾದಿ ಚಿಂತನೆಯ ನೆಲೆಯಲ್ಲಿ ತನ್ನ ಅಭಿಪ್ರಾಯವನ್ನು ಮಂಡಿಸುತ್ತಾ ಸಾಗುತ್ತದೆ.

ನಮ್ಮ ದೇಶದ ಸಂಸ್ಕೃತಿ, ಇದರೊಂದಿಗೆ ಬೇರೆ ಬೇರೆ ಭಾಷೆ, ಜನಾಂಗದ ಸಂಸ್ಕೃತಿಯನ್ನು ಜನರಿಗೆ ಮತ್ತೆ ಎಚ್ಚರಿಸಿ, ತಿಳಿಸುವ ಪ್ರಯತ್ನದಲ್ಲಿ ಕಾದಂಬರಿಗಳು ಬಹಳ ಮುಖ್ಯ ಪಾತ್ರವಹಿಸಿತು. ಕಾದಂಬರಿಕಾರವು ತಮ್ಮ ಕಾದಂಬರಿಗಳಲ್ಲಿ ವಾಸ್ತವತೆಯ ಹಲವು ಮುಖಗಳನ್ನು ತೆರೆದಿಡುತ್ತಾರೆ. ಕಾದಂಬರಿಗಳಲ್ಲಿ ಐತಿಹಾಸಿಕ ಕಾದಂಬರಿಗಳ ಬೆಳವಣಿಗೆಯು ಯುರೋಪಿನ ಸಾಹಿತ್ಯ ಲೋಕದಲ್ಲಿ ಮೊದಲು ಆಯಿತೆನ್ನಬಹುದು. ಇಲ್ಲಿ ಬರಹಗಾರರು, ಇತಿಹಾಸದ ವಸ್ತುವನ್ನು ಆಯ್ಕೆಮಾಡಿಕೊಂಡು, ಅದು ಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ಚರ್ಚೆಯನ್ನು ನಡೆಸುತ್ತಾರೆ. ಕಾದಂಬರಿಕಾರನು ಸಮಾಜದ ಬೇರೆ ಬೇರೆ ವಿಷಯಗಳಿಂದ ಪ್ರಭಾವಿತನಾಗಿ, ತನ್ನ ಬರವಣಿಗೆಯ ಮುಖಾಂತರ ಸಮಾಜದ ಮೇಲೆ ಪ್ರಭಾವವನ್ನು ಬೀರುವ ಕೆಲಸವನ್ನು ಮಾಡುತ್ತಾನೆ. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಲೋಕದಲ್ಲಿ ರಚನೆಯಾದ ಸಾವಿರಾರು ಕಾದಂಬರಿಗಳಲ್ಲಿ ಅಯ್ದ ಕಾದಂಬರಿಗಳು ನನ್ನ ಅಧ್ಯಯನಕ್ಕೆ ಆಕರಗಳಾಗಿ ಸಿಗಬಲ್ಲವು.

ಇದರೊಂದಿಗೆ ಎಂಫಿಲ್ ಸಂಶೋಧನಾ ಪ್ರಬಂಧಗಳಾದ, ನೂರ್‌ಜಹಾ ಎಸ್.ಎಫ್. ಅವರ 'ಸಾರಾ ಅಬೂಬಕ್ಕರ್‌ರವರ ಕಡೆಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು' ಮತ್ತು ಕವಿತಾ.ಬಿ ಇವರು ಬರೆದಿರುವ 'ಸಾರಾ ಅಬೂಬಕ್ಕರ್ ಕಥನ ಸಾಹಿತ್ಯದಲ್ಲಿ ಸಾಮಾಜಿಕ ವಿನ್ಯಾಸ ಈ ಎರಡು ಅಧ್ಯಯನಗಳು. ನನ್ನ ಅಧ್ಯಯನಕ್ಕೆ ಬಹಳಷ್ಟು ಮಾಹಿತಿಯನ್ನು ನೀಡುತ್ತದೆ. ಇದರೊಂದಿಗೆ ಮೋಮೀನ್ ಎಸ್. ಎಂ ಅವರ 'ಚಾರಿತ್ರಿಕ ಮಹಿಳೆಯನ್ನು ಕುರಿತು ಕನ್ನಡ ಕಾದಂಬರಿಗಳು' ಎಂಬ ಪಿಹೆಚ್.ಡಿ ಮಹಾಪ್ರಬಂಧವು ನನ್ನ ಅಧ್ಯಯನಕ್ಕೆ ದೊರೆತಿರುವ ಬಹುಮುಖ್ಯವಾದ ಅಕರಗಳಾಗಿವೆ ಕೊನೆಯದಾಗಿ, ಇರೂನ ಮಹ್ಮದ ಬರೆದಿರುವ 'ನೂರ್‌ಜಹಾನ್' ಎಂಬ ಕೃತಿಯೂ ಕೂಡ ಸ್ವಲ್ಪ ಮಟ್ಟಿನ ಮಾಹಿತಿಯನ್ನು ನೀಡುತ್ತದೆ.

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ 2016ರಲ್ಲಿ ಮೂರು ಸಂಪುಟಗಳಲ್ಲಿ ಪ್ರಕಟಿಸಿದ 'ಮಂಗಳೂರು ದರ್ಶನ'ದ ಒಂದನೇ ಸಂಪುಟದಲ್ಲಿ ಬಿ.ಎಂ.ಇಚ್ಲಂಗೋಡು ಅವರ 'ಮುಸ್ಲಿಮರ ಇತಿಹಾಸ' ಎಂಬ ಲೇಖನದಲ್ಲಿ ಮಂಗಳೂರಿನ ಮುಸ್ಲಿಮರ ಭಾಷೆ, ಸಂಸ್ಕೃತಿ, ವೃತ್ತಿ ಹಾಗೂ ಇತರ ವಿಚಾರಗಳ ಕುರಿತು ಸವಿಸ್ತಾರವಾದ ವಿವರಣೆಯನ್ನು ನೀಡಿರುತ್ತಾರೆ.

1998ರಲ್ಲಿ ಮಂಗಳೂರು ಜಿಲ್ಲಾಡಳಿತವು ಪ್ರಕಟಿಸಿದ ಸ್ವಾತಂತ್ರ್ಯದ ಸ್ವರ್ಣ ಹೆಜ್ಜೆ ಎಂಬ ಗ್ರಂಥದಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಭೌಗೋಳಿಕ ವಿಸ್ತಾರವನ್ನು ಕುರಿತು ವಿವರಿಸುತ್ತಾ ಮುಂದೆ ಕಾಸರಗೋಡು, ಉಡುಪಿ ಜಿಲ್ಲೆಗಳು ಸೇರಿದ್ದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯು ಹೇಗೆ ಬ್ರಿಟಿಷರ ನಿರಾತಂಕ ಅಧಿಪತ್ಯಕ್ಕೆ ಒಳಪಟ್ಟಿತು ಎಂಬುವುದನ್ನು ವಿವರಿಸುತ್ತಾರೆ. ಒಂದೇ ದೇಶದಲ್ಲಿ ಬಾಳುತ್ತಿದ್ದರೂ ಮುಸ್ಲಿಂ ಜಗತ್ತು ಹಲವಾರು ಕಾರಣಗಳಿಂದ ಅನೇಕ ಮುಸ್ಲಿಮೇತರರಿಗೆ ಅಪರಿಚಿತವೂ, ನಿಗೂಢವೂ, ಸಂಶಯಾತ್ಮಕವೂ ಆಗಿ ತೋರುವುದಿದೆ ಎಂಬ ವಿಚಾರವನ್ನು ಇಲ್ಲಿ ಚರ್ಚಿಸಲಾಗಿದೆ. ಒಂದು ಸಮುದಾಯದ ಒಳಹೊಕ್ಕು ನೋಡಿದರೆ ಪ್ರತಿಯೊಂದು ಸಮಾಜಕ್ಕೂ ತನ್ನದೇ ಆದ ಸಾಂಸ್ಕೃತಿಕ ಅನನ್ಯತೆ ಹಾಗೂ ಮಹತ್ವ ಇದೆ ಎನ್ನುವ ವಿಚಾರವನ್ನು ತಿಳಿಸುತ್ತಾರೆ.

ಡಾ.ಜಿ.ಎಸ್.ಅಮೂರರವರು ಬರೆದಿರುವ ಕನ್ನಡ ಕಥನ ಸಾಹಿತ್ಯ:ಕಾದಂಬರಿ ಕೃತಿಯಲ್ಲಿ ಕಾದಂಬರಿಯ ಮಹತ್ವವನ್ನು ಕುರಿತು ಚರ್ಚಿಸುತ್ತಾರೆ. ಹೇಗಲ್ ಕಾದಂಬರಿಯನ್ನು ಮಾಧ್ಯಮ ವರ್ಗದ ಪರಿಪ್ರೇಕ್ಷ್ಯದಲ್ಲಿ ಗ್ರಹಿಸುವ ವಿಧಾನವನ್ನು ಈ ಕೃತಿಯಲ್ಲಿ ಚರ್ಚಿಸುತ್ತಾರೆ. ಇವನ ಅಭಿಪ್ರಾಯದಲ್ಲಿ ಕಾದಂಬರಿ ಮಾಧ್ಯಮವರ್ಗದ ಜಗತ್ತಿನ ಮಹಾಕಾವ್ಯ. ಅದೇ ರೀತಿಯಲ್ಲಿ ಕಾದಂಬರಿಯ ಸ್ವರೂಪವನ್ನು ಕುರಿತ ಡಿ.ಎಚ್.ಲಾರೆನ್ಸ್‌ನ ಗ್ರಹಿಕೆಯನ್ನು ವಿವರಿಸುತ್ತಾ ಇವನು ಕಾದಂಬರಿಯನ್ನು ಮಾನವೀಯ ಸಂಬಂಧಗಳ ನೆಲೆಯಿಂದ ವ್ಯಾಖ್ಯಾನಿಸುತ್ತಾನೆ. ಮನುಷ್ಯ ಶೋಧಿಸಿದ ಸೂಕ್ಷ್ಮ ಸಂಬಂಧಗಳ ಅತ್ಯುತ್ತಮ ಉದಾಹರಣೆಯೆಂದರೆ ಕಾದಂಬರಿ. ಕಾದಂಬರಿ ನಿಜವಾದ ಸಂಬಂಧಗಳ ಗತಿಶೀಲ ಇಂದ್ರಧನಿಷ್ಯದ ದರ್ಶನವನ್ನೊದಗಿಸುವ ಶ್ರೇಷ್ಠ ಮಾಧ್ಯಮ ಎಂದು ಹೇಳುತ್ತಾನೆ.

ಡಾ. ಸಬೀಹಾ ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡ ಚಂದ್ರಗಿರಿ, ಬಂಡಾಯ ಕಾಲಘಟ್ಟದಲ್ಲಿ ತಮ್ಮ ಅಂತರಂಗದ ದನಿಗಳಿಗೆ ಅಕ್ಷರದ ರೂಪಕೊಟ್ಟು, ಪ್ರಧಾನ ಸಾಹಿತ್ಯ ಧಾರೆಯ ಖಾಯಂ ಓದುಗರಿಗೆ ತೀರ ಅಪರಿಚಿತವಾದ ಲೋಕವನ್ನು ಪರಿಚಯಿಸಿದ ಸಾರಾ ಅಬೂಬಕ್ಕರ್ ಅವರಿಗೆ ಅರ್ಪಿಸಿದ ಅಭಿನಂದನಾ ಗ್ರಂಥ. ಇವರ ವಿವಿಧ ಬರವನಿಗೆಗಳನ್ನು ಕುರಿತು ಇತರ ಬರಹಗಾರರಿಂದ ಹೊರಹೊಮ್ಮಿದ ಅಭಿಪ್ರಾಯಗಳನ್ನು ಈ ಕೃತಿಯಲ್ಲಿ ಸಂಗ್ರಹಿಸಿ ಪ್ರಕಟಿಸಲಾಗಿದೆ.

ಬೋಳುವಾರು ಮಹಮ್ಮದ್ ಕುಂಞಿಯವರು ಬರೆದಿರುವ 'ಸ್ವಾತಂತ್ರದ ಓಟ', 'ಓದಿರಿ', 'ಉಮ್ಮ' 'ಜೆಹಾದ್', 'ತುಂಡುಗೋಡೆ' ಕಾದಂಬರಿಗಳು, ಮುಸ್ಲಿಂ ಇತಿಹಾಸವನ್ನು ವಿವರಿಸುವುದರೊಂದಿಗೆ ಭಾರತದ ಇತಿಹಾಸದ ಬಹಳ ಮುಖ್ಯವಾದ ಕಾಲ, ಭಾರತದ ವಿಭಜನೆ, ಮತ್ತು ಅದರ ಪರಿಣಾಮಗಳ ಬಗ್ಗೆ ವಿವರಣೆಯನ್ನು ನೀಡುತ್ತದೆ. ಅಂತೆಯೇ ಸಾರಾ ಅಬೂಬಕ್ಕರ್ ಅವರು ಬರೆದಿರುವ 'ಚಂದ್ರಗಿರಿಯ ತೀರದಲ್ಲಿ', 'ತಳ ಒಡೆದ ದೋಣಿಯಲಿ, 'ವಜ್ರಗಳು', 'ಕದನವಿರಾಮ', 'ಸುಳಿ', 'ಪಂಜರ', 'ಇಳಿಜಾರು' ಕಾದಂಬರಿಗಳು, ಮುಸ್ಲಿಂ ಸಮಾಜದ ವಿವಿಧ ಮಜಲುಗಳನ್ನು ಪರಿಚಯಿಸುವುದರೊಂದಿಗೆ ಮುಸ್ಲಿಂ ಮಹಿಳಾ ಸ್ಥಿತಿಗತಿಯ ವಿವರಣೆಯನ್ನು ನೀಡುತ್ತದೆ. ಅಬ್ಬಾಸ್ ಮೇಲಿನಮನೆಯವರು ಬರೆದಿರುವ 'ಜನ್ನತ್ ಮೊಹಲ್ಲಾ' ಕಾದಂಬರಿಯೂ ಕೂಡ ಪೂರಕವಾದ ಮಾಹಿತಿಯನ್ನು ನೀಡುತ್ತದೆ. ಫಕೀರ್ ಮಹಮ್ಮದ್ ಕಟ್ಪಾಡಿಯವರು ಬರೆದಿರುವ 'ಸರಕುಗಳು', ಮತ್ತು 'ನೊಂಬು', ರಹಮತ್ ತರಿಕೆರೆಯವರು ಬರೆದಿರುವ 'ಕರ್ನಾಟಕ ಸೂಫಿಗಳು' ಮತ್ತು 'ಕನ್ನಡ ಸಾಹಿತ್ಯ ವಾಗ್ಯುದ್ಧಗಳು, ಅಧ್ಯಯನಕ್ಕೆ ಬಹುಮುಖ್ಯವಾದ ಆಕರಗಳಾಗಿದೆ.

ಸಾರಾ ಅಬೂಬಕ್ಕರ್ ಅವರು ಕನ್ನಡ ಸಾಹಿತ್ಯದ ಮಹಾನ್ ಬರಹಗಾರರು ಸ್ತ್ರೀವಾದಿ ಬರಹಗಾರರಲ್ಲಿ ಪ್ರಮುಖರಾದವರು.ಇವರ ಬಹುತೇಕ ಕೃತಿಗಳು ಸ್ತ್ರೀ ಸಂವೇದನೆಯ ಕುರಿತು ಚರ್ಚೆಯನ್ನು ನಡೆಸುತ್ತೇವೆ. ಇವರ 'ವಜ್ರಗಳು' ಕಾದಂಬರಿಯೂ 'ತಲಾಖ್' ವಿಚಾರದ ಕುರಿತು ಚರ್ಚೆಯನ್ನು ನಡೆಸುತ್ತದೆ.ಈ ಕೃತಿಯಲ್ಲಿ ಬರುವ ಕಥಾನಾಯಕಿ ನಫೀಸಾಳಿಗೆ ಗಂಡ ಬದ್ರುದ್ದೀನ್ ತಲಾಖ್ ನೀಡಿದ ಸಂದರ್ಭದಲ್ಲಿ ಅವಳಿಗೆ ಯಾವುದೇ ರೀತಿಯ ನಿರ್ವಹಣಾ ವೆಚ್ಚ ಸಿಗುವುದಿಲ್ಲ. ಇಂತಹ ಸಂದರ್ಭದಲ್ಲಿ ಅವಳು ತನ್ನ ತವರು ಮನೆಗೆ ಹೋಗಬೇಕಾಗುತ್ತದೆ.ಒಂದು ಗಂಡು ಮಾಡಿದ ತಪ್ಪಿಗೆ ಸಂಕಷ್ಟಗಳನ್ನು ಎದುರಿಸಬೇಕಾದವಳು ಹೆಣ್ಣು. ಇವಳು ಮನೆಯಿಂದ ಹೊರಬಂದು, ತನ್ನದೇ ಆದ ಮನೆಯನ್ನು ನಿರ್ಮಾಣ ಮಾಡಿ, ಒಂದು ಹೆಣ್ಣು ಮಗುವನ್ನು ದತ್ತು ಪಡೆದು, ಅದೇ ಸಮಾಜದಲ್ಲಿ ಸ್ವಾತಂತ್ರ್ಯ ಜೀವನವನ್ನು ನಡೆಸುತ್ತಾಳೆ.ಫಕೀರ್ ಮಹಮ್ಮದ್ ಕಟ್ಪಾಡಿಯವರು ಬರೆದಿರುವ 'ನೊಂಬು' ಕೃತಿಯು, ಮುಸ್ಲಿಂ ಆಸ್ಮಿತೆಯ ಕುರಿತ ಕನ್ನಡ ಕಾದಂಬರಿಗಳು–ಒಂದು ಚಾರಿತ್ರಿಕ ಅಧ್ಯಯನ ಎಂಬ ಶಿರ್ಷಿಕೆಯ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ನೀಡುವುದರೊಂದಿಗೆ ಬಹುಮುಖ್ಯವಾದ ಆಕರವಾಗಿದೆ.

ಸಾರಾ ಅಬೂಬಕ್ಕರ್‌ವರ ಮತ್ತೊಂದು ಮಹತ್ವದ ಕಾದಂಬರಿ 'ಕದನವಿರಾಮ'.ಇದು 1991 ರಲ್ಲಿ ಪ್ರಕಟವಾಯಿತು.ಈ ಕಾದಂಬರಿಯ ಕಥಾನಾಯಕಿ 'ನಸೀಮಾ'.ನಸೀಮಾ ಒಂದು ಬಡ ಕುಟುಂಬದಲ್ಲಿ ಹುಟ್ಟಿ ಬೆಳೆದವಳು.ಅದುದರಿಂದ ಇವಳು ಮದುವೆ ಎಂಬ ಮಾರುಕಟ್ಟೆಯೊಳಗಡೆ ಅನೇಪೇಕ್ಷಿತಗಳಾಗಿ

ಉಳಿದುಬಿಡುತ್ತಾಳೆ.ಆದರೂ ಇವಳು ಸಮಾಜದಲ್ಲಿ ತನ್ನ ಹಕ್ಕಿಗೋಸ್ಕರ ಹೋರಾಟವನ್ನು ನಡೆಸಿ ತಾನು ಆಶಿಸಿದಂತೆ ತನ್ನ ಜೀವನವನ್ನು ರೂಪಿಸಿಕೊಳ್ಳುತ್ತಾಳೆ.ಇದರೊಂದಿಗೆ ಸಾರಾ ಅಬೂಬಕ್ಕಾರ್‌ರವರು, ಒಂದು ಹೆಣ್ಣಿನ ಚಿತ್ರಣವನ್ನು, ಸಾಮಾಜಿಕ ಜೀವನವನ್ನು ಕ್ರಮಬದ್ಧವಾಗಿ ಚಿತ್ರಿಸಿದ್ದಾರೆ.ಈ ಕಾದಂಬರಿಯು ಅಧ್ಯಯನದ ದೃಷ್ಟಿಯಲ್ಲಿ ಬಹಳ ಪ್ರಮುಖವಾದ ಆಕರವಾಗಿದೆ.

'ತಳ ಒಡೆದ ದೋಣಿಯಲಿ' ಎಂಬ ಕಾದಂಬರಿಯು, ಕನ್ನಡ ಸಾಹಿತ್ಯಕ್ಕೆ ಸಾರಾಅಬೂಬಕ್ಕರ್‌ವರ ಮತ್ತೊಂದು ಕೊಡುಗೆಯಾಗಿದೆ.ಈ ಕಾದಂಬರಿಯಲ್ಲಿ ಸಾರಾ ಅಬೂಬಕ್ಕರ್ ಅವರು ತನ್ನ ಜೀವನದ ಸ್ವಂತ ಘಟನೆಗಳಿಗೆ, ಒಂದಷ್ಟು ಕಾಲ್ಪನಿಕ ವಿಚಾರಗಳನ್ನು ಸೇರಿಸಿಕೊಂಡು ಕಥೆಯನ್ನು ಹೆಣೆಯುತ್ತಾ ಹೋಗಿದ್ದಾರೆ.ಲೇಖಕರ ಪತಿ ಬೆಂಗಳೂರಿನ ಕೃಷಿಯೋತ್ಪನ ಮಾರುಕಟ್ಟೆ ಇಲಾಖೆಯಿಂದ, ರಾಯಚೂರಿನ ತುಂಗಭದ್ರಾ ಕಾಲುವೆ ವಿಭಾಗಕ್ಕೆ ವರ್ಗಾವಣೆ ಮಾಡಿದ ಸಂದರ್ಭದಲ್ಲಿ ಇಷ್ಟವಿಲ್ಲದಿದ್ದರೂ ಆ ಕಾಲುವೆ ವಿಭಾಗಕ್ಕೆ ಹೋಗಲೇಬೇಕಾಯಿತು. ವರ್ಗಾವಣೆ ಆಜ್ಞೆಯನ್ನು ರದ್ದುಗೊಳಿಸಲು ಪ್ರಯತ್ನಿಸಿದರೂ ಸಫಲವಾಗಲಿಲ್ಲ.

ತುಂಗಭದ್ರಾ ಕಾಲುವೆಯ ಸಮಸ್ಯೆಯ ಜೊತೆಗೆ, ಅಲ್ಲಿಗೆ ಹೋದ ಲೇಖಕರು ಮತ್ತು ಅವರ ಪತಿ ಎದುರಿಸುವ ಸಮಸ್ಯೆಗಳು, ರೈತರು ಮತ್ತು ಇಂಜಿನಿಯರ್‌ಗಳು ಎದುರಿಸುವ ಸಮಸ್ಯೆಯನ್ನು ಚರ್ಚಿಸಿದ್ದಾರೆ. ಇದೇ ಸಂದರ್ಭದಲ್ಲಿ ವರ್ಗಾವಣೆ ಆಜ್ಞೆಯನ್ನು ರದ್ದುಗೊಳಿಸುವ ಪ್ರಯತ್ನದ ಸಂದರ್ಭದಲ್ಲಿ ಅವರು ಎದುರಿಸಿದ ರಾಜಕಾರಣದ ಭಷ್ಟ್ರಾಚಾರ, ಅದರೊಂದಿಗೆ 1983ರ ಚುನಾವಣೆಯ ಬಗೆಗೆ ಒಂದಷ್ಟು ವಿವರಣೆಯನ್ನು ನೀಡಿದ್ದಾರೆ. ಇಂದಿನ ಈ ರಾಜಕೀಯ ವ್ಯವಸ್ಥೆಯಲ್ಲಿ ಒಬ್ಬ ನಿಷ್ಠಾವಂತ ಅಧಿಕಾರಿಯು ಏನೆಲ್ಲಾ ಸಮಸ್ಯೆಯನ್ನು ಎದುರಿಸುತ್ತಾನೆ, ಎಂಬುದನ್ನು ವಿವರವಾಗಿ ತಿಳಿಸಿದ್ದಾರೆ. ಹಾಗಾಗಿ ಈ ಕಾದಂಬರಿಯಲ್ಲಿ ಪ್ರಕಟಗೊಂಡಿರುವ ರಾಜಕೀಯ ವ್ಯವಸ್ಥೆ, ಭಷ್ಟ್ರಾಚಾರದ ನಿರೂಪಣೆ, ಸಮಾಜದ ಬಗೆಗಿನ ವಿವರಣೆ, ಎಲ್ಲವೂ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ನೀಡುತ್ತದೆ.

ಫಕೀರ್ ಮಹಮ್ಮದ್ ಕಟ್ಪಾಡಿ ಯವರ ಮತ್ತೊಂದು ಕಾದಂಬರಿ 'ಸರಕುಗಳು'. ಇದು ಕನ್ನಡ ಸಾಹಿತ್ಯ ಲೋಕದಲ್ಲಿ, ಅತ್ಯಂತ ಪ್ರಮುಖವಾದ ಕೃತಿಯಾಗಿದೆ.ಕೇವಲ ಕನ್ನಡ ಸಾಹಿತ್ಯಕ್ಕೆ ಮಾತ್ರ ಈ ಕೃತಿಯು ಸೀಮಿತವಾಗಿಲ್ಲ ಬದಲಾಗಿ, ಈ ಕೃತಿಯೂ, ಹಿಂದಿಯಲ್ಲಿ, 'ಮಾಲ್' ಎಂಬ ಶೀರ್ಷಿಕೆಯಡಿ ಪ್ರಕಟವಾಗಿದೆ.ಒಟ್ಟಾರೆಯಾಗಿ ಈ ಕೃತಿಯು ಭಾರತದ ಸಮಾಜಕ್ಕೆ, ಓದುಗರಿಗೆ ಒಂದು ಪ್ರಮುಖವಾದ ಕೊಡುಗೆಯಾಗಿದೆ.ಈ ಕೃತಿಯಲ್ಲಿ ಬರುವ ಬೇರೆ ಬೇರೆ ಸನ್ನಿವೇಶಗಳು ಅಧ್ಯಯನಕ್ಕೆ 'ಇಳಿಜಾರು' ಕಾದಂಬರಿಯು, ಸಾರಾ ಅಬೂಬಕ್ಕರ್‌ರವರ, ಮತ್ತೊಂದು ಪ್ರಮುಖ ಕೃತಿ, ಈ ಕೃತಿಯು, ಅವರ ಉಳಿದ ಕೃತಿಗಳಂತೆಯೇ, ಪೂರಕವಾದ ಮಾಹಿತಿಯನ್ನು ನೀಡುವುದರೊಂದಿಗೆ ಪ್ರಮುಖವಾದ ಆಕರವಾಗಿದೆ.

ಸಾರಾ ಅಬೂಬಕ್ಕರ್‌ವರ ಮತ್ತೊಂದು ಕೃತಿ ‘ಪಂಜರ’ ಈ ಕಾದಂಬರಿಯಲ್ಲಿಯೂ, ಇವರು ಮಹಿಳಾ ಸಮಸ್ಯೆಯ ಕಡೆಗೆ ಹೆಚ್ಚಿನ ಒತ್ತನ್ನು ನೀಡಿದ್ದಾರೆ ಆದರೆ ಇಲ್ಲಿ ಯಾವುದೇ ಒಂದು ಸಮುದಾಯವನ್ನು ಕುರಿತು, ಕಥಾನಕವನ್ನು ರಚಿಸದೇ ಇಡೀ ಸಮಾಜವನ್ನು ಎಚ್ಚರಿಸುವ ಕೆಲಸವನ್ನು ಲೇಖಕರು ಮಾಡಿದ್ದಾರೆ. ಮುಖ್ಯವಾಗಿ ಈ ಕಾದಂಬರಿಯ ಕಥಾವಸ್ತುವೇ ಬಹಳ ಗಮನಾರ್ಹವಾದುದು.ಅವಿವಾಹಿತ ತಾಯಿಯೊಬ್ಬಳು ಸಮಾಜದಲ್ಲಿ ತನ್ನ ಮಗುವಿನೊಂದಿಗೆ ಜೀವನವನ್ನು ನಡೆಸಬೇಕಾದರೆ, ಅವಳು ಎದುರಿಸುವ ಸಮಸ್ಯೆಗಳ ಕುರಿತ ನಿರೂಪಣೆಯನ್ನು ನೀಡಿದ್ದಾರೆ.ಕೆಲವೊಂದು ಸಂದರ್ಭದಲ್ಲಿ ತನ್ನ ಮಗು ತನ್ನ ಕಣ್ಣೆದುರಿಗಿದ್ದರೂ, ಅದು ತನ್ನ ಮಗು ಎಂದು ಹೇಳಿಕೊಳ್ಳಲಾಗದೆ, ಆ ತಾಯಿ ಅನುಭವಿಸುವ ಯಾತನೆಯ ಚಿತ್ರಣವನ್ನು ನೀಡಿದ್ದಾರೆ.

ಇದೆಲ್ಲದರ ಜೊತೆಗೆ ಹೆಣ್ಣಿನ ಈ ಸ್ಥಿತಿಗೆ ಕಾರಣನಾದ ಗಂಡು ಯಾವುದೇ ಪಶ್ಚಾತಾಪದ ಮನೋಭಾವವಿಲ್ಲದೆ, ಸಮಾಜದಲ್ಲಿ ತಲೆಯೆತ್ತಿ ಹೇಗೆ ಬದುಕುತ್ತಾನೆ ಎಂಬುವುದನ್ನು ವಿವರಿಸಿದ್ದಾರೆ. ಒಟ್ಟಾರೆಯಾಗಿ ಈ ಒಂದು ಸಮಸ್ಯೆಯ ಸುತ್ತ ಸುತ್ತಿಕೊಂಡಿರುವ ಬೇರೆ ಬೇರೆ ಸಮಸ್ಯೆಗಳನ್ನು ಇದರಲ್ಲಿ ವಿವರಿಸುವುದರೊಂದಿಗೆ, ಒಂದು ಹೆಣ್ಣಾದವಳು ತಾನು ಹೊತ್ತು, ಹೆತ್ತ ಮಗುವನ್ನು ಸಮಾಜಕ್ಕೆ ಹೆದರಿ ಕೊಲೆ ಮಾಡುವ ಪರಿಸ್ಥಿತಿಯನ್ನು ಎದುರಿಸುತ್ತಾಳೆ.ಇಂತಹ ಸಂದರ್ಭದಲ್ಲಿ ಅವಳಿಗೆ ಅಂತಃಕರಣವಿರುವುದಿಲ್ಲವೇ? ಎಂಬ ಪ್ರಶ್ನೆಯನ್ನು ಲೇಖಕರು ಎತ್ತುತ್ತಾರೆ.ಈ ರೀತಿ ಹಲವಾರು, ಪ್ರಶ್ನೆಗಳೊಂದಿಗೆ ‘ಪಂಜರ’ ಕಾದಂಬರಿಯು ಮುಸ್ಲಿಂ ಆಸ್ಮಿತೆಯ ಕುರಿತ ಕನ್ನಡ ಕಾದಂಬರಿಗಳು–ಒಂದು ಚಾರಿತ್ರಿಕ ಅಧ್ಯಯನ ಎಂಬ ಅಧ್ಯಯನಕ್ಕೆ ಬಹಳಷ್ಟು ಉಪಯುಕ್ತವಾದ ಆಕರವಾಗಿದೆ.

ಇವರ ಮತ್ತೊಂದು ಕಾದಂಬರಿ ‘ಸುಳಿ’.ಇದೇ ಲೇಖಕರು ‘ಇಳಿತ’, ‘ಭರತ’, ‘ಪ್ರವಾಹ’, ‘ಸುಳಿ’ ಎಂಬ ನಾಲ್ಕು ಕಾದಂಬರಿಗಳನ್ನು ರಚಿಸಿದ್ದರು.ಮುಂದೆ ಈ ನಾಲ್ಕು ಕಾದಂಬರಿಗಳನ್ನು ಒಟ್ಟು ಸೇರಿಸಿ, ‘ಸುಳಿಯಲ್ಲಿ ಸಿಕ್ಕವರು’ ಮತ್ತು ‘ಪ್ರವಾಹ ಸುಳಿ’ ಎಂಬ ಎರಡು ಭಾಗಗಳಲ್ಲಿ ಪ್ರಕಟಿಸಿದರು.ಆದರೆ 2004 ರಲ್ಲಿ ಈ ಎಲ್ಲಾ ಕಾದಂಬರಿಗಳನ್ನು ಒಟ್ಟು ಸೇರಿಸಿ ‘ಸುಳಿ’ ಎಂಬ ಒಂದೇ ಕಾದಂಬರಿಯನ್ನು ರಚಿಸಿದರು.ಈ ಕಾದಂಬರಿಯ ಕೂಡ ಅಧ್ಯಯನದ ವಿವಿಧ ಹಂತಗಳಲ್ಲಿ ಆಕರಗಳಾಗಿ ಮಾಹಿತಿಯನ್ನು ನೀಡುತ್ತದೆ.

ರಹಮತ್ ತರಿಕೆರೆಯವರು ಕನ್ನಡ ಸಾಹಿತ್ಯಲೋಕದ ಮತ್ತೊಬ್ಬ ಶ್ರೇಷ್ಠ ಬರಹಗಾರರು. ಇವರ ‘ಕನ್ನಡ ಸಾಹಿತ್ಯ ವಾಗ್ವುದ್ಯಗಳು’ ಎಂಬ ಕೃತಿಯು, ಬಹಳ ಪ್ರಮುಖವಾದ ಆಕರವಾಗಿದೆ. ಅಂತೆಯೇ ಅಬ್ಬಾಸ್ ಮೇಲಿನಮನಿಯವರು ಬರೆದಿರುವ ‘ಜನ್ನತ್ ಮೊಹಲ್ಲಾ’ ಕೃತಿಯು 2008ರಲ್ಲಿ ಪ್ರಕಟವಾಯಿತು. ಈ ಕೃತಿಯೂ ಕೂಡ ಬಹಳ ಪ್ರಮುಖವಾದ ಆಕರವಾಗಿದೆ.

ಬೋಳುವಾರು ಮಹಮ್ಮದ್ ಕುಂಞಿಯವರ ಬಹುಮುಖ್ಯವಾದ ಕಾದಂಬರಿ 'ಜೆಹಾದ್' ಇದು 1987ರಲ್ಲಿ ಮೊದಲ ಮುದ್ರಣವನ್ನು, ನಂತರ 2010ರಲ್ಲಿ ಎರಡನೇ ಮುದ್ರಣವನ್ನು ಕಂಡಿತು.ಇದು ಮೊದಲಿಗೆ 'ತರಂಗ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟನೆಯನ್ನೂ ಕಂಡಿತು.ನಂತರ ಇದು ಕೃತಿಯ ರೂಪವನ್ನು ಪಡೆದುಕೊಂಡಿತು.ಈ ಕಾದಂಬರಿಯಲ್ಲಿ ಲೇಖಕರು ತಮ್ಮ ಜೀವನದ ಘಟನೆಗಳನ್ನು ವಿವರಿಸುತ್ತಾರೆ. ವಿಧ್ಯಾಭ್ಯಾಸವನ್ನು ಪಡೆದ ಲೇಖಕರು, ತನ್ನ ಬ್ಯಾಲದ ದಿನಗಳ ಅಸಹನೆಯನ್ನು, ಈ 'ಜೆಹಾದ್' ಕಾದಂಬರಿಯಲ್ಲಿ ಊಹನಾತ್ಮಕವಾಗಿ ವಿವರಿಸುತ್ತಾರೆ.ಈ ಕಾದಂಬರಿಯಲ್ಲಿ ಲೇಖಕರು ಎರಡು ಗುರಿಗಳನ್ನು ತಲುಪುವ ಪ್ರಯತ್ನವನ್ನು ಮಾಡುತ್ತಾರೆ.ಮೊದಲು ಕನ್ನಡಿಗರ ಪಾಲಿಗೆ, ಅಂದರೆ ಓದುಗರ ಪಾಲಿಗೆ ಪರಿಚಿತವಿಲ್ಲದ ಸಮುದಾಯದ ಬಗೆಗೆ ಓದುವಂತೆ ಪ್ರೇರೆಪಣೆಯನ್ನು ನೀಡುವುದರೊಂದಿಗೆ ನಾವು ಈ ಸಮುದಾಯದ ಬಗೆಗೆ ತಿಳಿದುಕೊಂಡಿರುವುದು ಹೀಗೆಯಾ?ಎಂದು ತಮ್ಮನ್ನು ತಾವು ಪ್ರಶ್ನಿಸಿಕೊಳ್ಳುವಂತೆ ಮಾಡುವುದು ಎರಡನೇಯದಾಗಿ ಅಷ್ಟೇನೂ ಪರಿಚಿತವಿಲ್ಲದ ಸಮುದಾಯದ ಬಗೆಗೆ ನಾವು ತಿಳಿದುಕೊಂಡಿರುವುದು ತಪ್ಪೇ? ಅವರು ಹಾಗೆ ಇರುವುದಿಲ್ಲವೇ? ಎಂಬುವುದನ್ನು ಎಲ್ಲಾ ಓದುಗರಿಗೂ ಮನದಟ್ಟು ಮಾಡಿಕೊಡುವುದು.

ಈ ಕಾದಂಬರಿಯಲ್ಲಿ ಲೇಖಕರು, ಜಾತಿ, ಮತ, ಧರ್ಮಗಳು ಸಮಾಜದಲ್ಲಿ ಏನೆಲ್ಲಾ ವಿಚಾರಗಳ ಮೇಲೆ ಪರಿಣಾಮವನ್ನು ಬೀರಬಲ್ಲವು ಎಂಬುವುದನ್ನು ಅತ್ಯಂತ ಪರಿಣಾಮಕಾರಿಯಾಗಿ ವಿವರಿಸಿದ್ದಾರೆ.ಅದಯೊಂದಿಗೆ ಒಂದು ಮುಸ್ಲಿಂ ಸಮುದಾಯದಿಂದ ಬಂದ ಹೆಣ್ಣು ಮಕ್ಕಳು ಶಿಕ್ಷಣವನ್ನು ಪಡೆಯಲು ಪಡುವ ಕಷ್ಟ, ಅದರೊಂದಿಗೆ ಎಲ್ಲವನ್ನು ಎದುರಿಸಿ ಶಿಕ್ಷಣವನ್ನು ಪಡೆದರೆ, ಅವಿಧ್ಯಾವಂತ, ಸಾಂಪ್ರಾದಾಯಿಕ, ಜನರಿಂದ ಎದುರಿಸಬೇಕಾದ ಸವಾಲುಗಳನ್ನು ಚರ್ಚಿಸುತ್ತಾರೆ.ಯಾವುದೇ ಧರ್ಮವು ಶಾಸ್ತ್ರ, ಶಿಕ್ಷಣದ ಬಗೆಗೆ ಯಾವುದೇ ಕಟ್ಟುಪಾಡುಗಳನ್ನು ಹಾಕಿಲ್ಲ. ಆದರೆ, ಹಿರಿಯ ತಲೆಮಾರಿನ ಜನರು ತಮ್ಮದೇ ಆದ ಕಟ್ಟುಪಾಡುಗಳ ಮೂಲಕ ನಿರ್ಭಂದವನ್ನು ಹೇರುತ್ತಾರೆ.

ಇಲ್ಲಿ ಕಥಾನಾಯಕನಾದ ರಷೀದ್, ಶಿಕ್ಷಣವನ್ನು ಪಡೆದು ಟೀಚರ್‌ನ ಸಲಹೆಯಂತೆ, ಕೆಲಸದ ನಿಮಿತ್ತ ಮಂಗಳೂರಿಗೆ ಹೋಗುತ್ತಾನೆ. ಅಲ್ಲಿ ಟೀಚರ್‌ನ ತಂಗಿಯ ಮಗಳಾದ ರೋಸಿಯ ಪರಿಚಯವೂ ಆಗುತ್ತದೆ.ಇದರೊಂದಿರೆ ರಷೀದ್‌ನಿಗೆ, ತನ್ನ ತಂಗಿ ಸಲ್ಮಾಳ ಮೇಲೆ ಆಗಾಧವಾದ ಪ್ರೀತಿ. ಈ ಕಾದಂಬರಿಯಲ್ಲಿ ಲೇಖಕರು, ಜಾತಿಯ ಬಗೆಗೆ ಜನರಿಗಿರುವ ಸೂಕ್ಷ್ಮತೆಯನ್ನು ರಷೀದ್‌ನ ಮೂಲಕ ತಿಳಿಸುತ್ತಾರೆ. ಒಂದು ಸನ್ನಿವೇಶದಲ್ಲಿ ರಷೀದ್, ಕ್ರಿಶ್ಚಿಯನ್ ಜನಾಂಗದ ರೋಸಿಯನ್ನು ಮದುವೆಯಾಗಬೇಕಾದ ಪರಿಸ್ಥಿತಿಯು ಎದುರಾದಾಗ, ಜಾತಿಗೆ ಹೆದರಿ ಅದನ್ನು ತಿರಸ್ಕರಿಸುತ್ತಾನೆ. ತಾನು ಧರ್ಮವನ್ನು ಮೀರಿ ನಡೆದರೆ, ತನ್ನ ತಂಗಿಯ ಬಾಳು ಎಲ್ಲಿ ಹಾಳಾಗಿ ಬಿಡುತ್ತದೋ?ಎನ್ನುವ ಪೀಕಲಾಟಗಳ ನಡುವೆ ಸಿಲುಕಿಕೊಳ್ಳುವ ಸನ್ನಿವೇಶವನ್ನು ವಿವರಿಸುತ್ತಾ ಹೋಗುತ್ತಾರೆ. ಒಟ್ಟಾಗಿ ಜೆಹಾದ್

ಎನ್ನುವ ಕಾದಂಬರಿಯಲ್ಲಿ, ಲೇಖಕರು ಜಾತಿ ಎನ್ನುವ ಒಂದು ಗಂಭೀರವಾದ ವಿಚಾರವನ್ನು ಸಮಾಜದಲ್ಲಿ ಸೇರಿಸಿ, ಅದರಿಂದ ಒಬ್ಬ ವಿದ್ಯಾವಂತ, ಮುಸ್ಲಿಂ ಯುವಕನು ಎದುರಿಸುವ ಹಂತ ಹಂತದ ಸವಾಲುಗಳನ್ನು ವಿವರಿಸಿದ್ದಾರೆ.ಒಟ್ಟಾರೆಯಾಗಿ, ಇದು ಪರಿಚಿತವಿಲ್ಲದ ಸಮುದಾಯದ ಸಂಸ್ಕೃತಿಯನ್ನು ವಿವರಿಸುವ ಒಂದು ಅದ್ಬುತವಾದ ಕಾದಂಬರಿ. ಈ ಕಾದಂಬರಿಯು ಅಧ್ಯಯನಕ್ಕೆ ಬಹಳ ಮುಖ್ಯವಾದ ಆಕರವಾಗಿದೆ.ಇಲ್ಲಿ ವ್ಯಕ್ತವಾಗುವ, ಜಾತಿಯ ಬಗೆಗಿನ ವಿಚಾರಗಳು ಅದರೊಂದಿಗೆ ಬೇರೆ ಬೇರೆ ಸಂಸ್ಕೃತಿಯ ಸಮ್ಮಿಲನದ ವಿವರಣೆಯ ಒಂದು ಮಹತ್ವವಾದ ವಿಚಾರವಾಗಿದೆ.

'ಕರ್ನಾಟಕದ ಸೂಫಿಗಳು' ರಹಮತ್ ತರಿಕೆರೆಯವರ ಮತ್ತೊಂದು ಪ್ರಮುಖ ಕೃತಿ.ಇವರು ತಮ್ಮ ಬರವಣಿಗೆಯಲ್ಲಿ ಧಾರ್ಮಿಕ ಮೂಲಭೂತವಾದ, ಕೋಮುವಾದ ಜಾತ್ಯಾತೀತವಾದದ ಬಗೆಗೆ ಚರ್ಚೆಯನ್ನು ನಡೆಸುತ್ತಾರೆ. 'ಕರ್ನಾಟಕ ಸೂಫಿಗಳು' ಕೃತಿಯಲ್ಲಿ ಸೂಫಿಗಳ ವಿಚಾರಗಳು, ತತ್ವಗಳು, ಮತ್ತು ಅವರ ಜೀವನದ ಬಗೆಗೆ ವಿವರಣೆಯನ್ನು ನೀಡಿದ್ದಾರೆ. ಇವರ ಈ ಕೃತಿಯು ಮುಸ್ಲಿಂ ಇತಿಹಾಸದ ವಿವರಣೆಯನ್ನು ನೀಡುವ ಸಂದರ್ಭದಲ್ಲಿ ಪ್ರಮುಖ ಆಕರವಾಗಬಲ್ಲದು. ಇದರೊಂದಿಗೆ ಅನೇಕ ಸೂಫಿಸಂತರ, ವಿಚಾರಗಳ ಬಗೆಗೆ ವಿವರವನ್ನು ನೀಡುತ್ತದೆ.

ಬೋಳುವಾರು ಮಹಮ್ಮದ್ ಕುಂಞಿಯವರು ನಮ್ಮಕಾಲದ ಮಹಾನ್ ಪ್ರತಿಭೆ, ತಮ್ಮ 'ಸ್ವಾತಂತ್ರ್ಯದ ಓಟ' ಎಂಬ ಕಾದಂಬರಿಯ ಮೂಲಕ ಇಡೀ ಭಾರತೀಯರ ಬದುಕಿನ ಮಹಾಯಾನವನ್ನು ಚಿತ್ರಿಸಿದ್ದಾರೆ. ಸಿಖ್ ಹೆಣ್ಣುಮಕ್ಕಳಿಬ್ಬರಿಗೆ ಸಹಾಯ ಹುಡುಗನೊಬ್ಬ, ತನ್ನ ದೇಶಕ್ಕೆ ಹಿಂತಿರುಗಿ ಹೋಗಲಾರದ ಇಕ್ಕಟ್ಟಿಗೆ ಸಿಲುಕಿ ಐವತ್ತು ವರ್ಷಗಳ ಕಾಲ ಭಾರತದಲ್ಲೇ ಉಳಿದು ಅನುಭವಿಸುವ ಸುಖ, ಸಂತೋಷ, ಕಷ್ಟ–ನಷ್ಟಗಳ ಸಂಕಥನವೇ ಈ ಕಾದಂಬರಿ ಕಾದಂಬರಿಯಲ್ಲಿ ಎರಡು ಹೆಣ್ಣು ಮಕ್ಕಳನ್ನು ರಕ್ಷಿಸುವ ಹೊಣೆಗಾರಿಕೆಯೊಂದಿಗೆ ಆರಂಭವಾಗುವ ಸ್ವಾತಂತ್ರ್ಯದ ಓಟ. ಕ್ರಮೇಣ ಕಥಾನಾಯಕನ ಸ್ವಯಂ ರಕ್ಷಣೆಯ ಕರ್ತವ್ಯವಾಗಿ ಬದಲಾಗುತ್ತದೆ. ಕಥಾನಾಯಕನ್ನು ತನ್ನ ಮೊದಲಿನ ಗುರುತನ್ನು ವಿವರಿಸಲಾಗದೇ ಹೊಸ ಗುರುತನ್ನು ಸ್ಥಾಪಿಸುತ್ತ.ಈ ನೆಲದ ಮನುಷ್ಯನಾಗುತ್ತಾನೆ. ಭಾರತದ ವಿಭಜನೆಯ ಸಂದರ್ಭದ ಜನರು ನರಳಾಟ, ದುಃಖ ಸಂಕಷ್ಟಗಳನ್ನು ವಿವರಿಸುವ ಈ ಕಾದಂಬರಿಯು, ಎಂತಹ ಕಲ್ಲೆದೆಯನ್ನು ಕರಗಿಸುವ ಶಕ್ತಿಯನ್ನು ಹೊಂದಿದೆ.ಕಥಾನಾಯಕನು, ಮುಂದೆ ಸಂಬಂಧಗಳ ಸೆಳೆತಗಳಲ್ಲಿ ಸಿಲುಕಿಕೊಳ್ಳುವ ದೃಶ್ಯವನ್ನು ಅತ್ಯಂತ ಸೊಗಸಾಗಿ ವಿವರಿಸುತ್ತಾ ಹೋಗುತ್ತಾರೆ.

ಇದೆಲ್ಲದರ ಜೊತೆಗೆ ಕಾದಂಬರಿಕಾರರು, ಸ್ಥಳೀಯ ವಿಚಾರಗಳನ್ನು ಅತ್ಯಂತ ವರ್ಣನೀಯವಾಗಿ ವಿವರಿಸಿದ್ದಾರೆ. ಸ್ಥಳೀಯ ಸಂಸ್ಕೃತಿ, ಆಚರಣೆಗಳು, ಸಂಚಿಕೆಗಳು, ಮಹತ್ವದ ಸಂಗತಿಗಳಾಗಿ ಮೂಡಿಬಂದಿದೆ.ಮುತ್ತುಪ್ಪಾಡಿ ಎಂಬ ಸ್ಥಳೀಯ ಪ್ರದೇಶದ ಜನರ ಕೂಡು ಜೀವನ, ಹಿಂದೂ ಮುಸ್ಲಿಂ

ಎಂಬ ಯಾವುದೇ ಭೇದವಿಲ್ಲದೆ, ಸಾಮರಸ್ಯದಿಂದ ಜೀವನ ನಡೆಸುವ ಚಿತ್ರಣ, ಅದರೊಂದಿಗೆ ಕೋಮುವಾದದ ಬೆಳವಣಿಗೆಯ ಬಗೆಗೂ ವಿವರಣೆಯನ್ನು ನೀಡುತ್ತಾರೆ. ಊರ ಜಾತ್ರೆಯಂಥ ಸಾಂಸ್ಕೃತಿಕ ಉತ್ಸವಗಳು, ಕೋಮಗಲಭೆಯ ವೇದಿಕೆಗಳಾಗಿ ಮಾರ್ಪಾಡು ಹೊಂದುವುದರೊಂದಿಗೆ ಜವುಳಿ ವ್ಯಾಪಾರಿಗಳಾದ ಅಪ್ಪಣ್ಣ ನಾಯ್ಕರು ಹಾಗೂ ಗಫೂರ್ ಸಾಹುಗಾರರಿಂದ ಈ ಸಮಸ್ಯೆ ಮತ್ತಷ್ಟು ಬಿಗಡಾಯಿಸುವಂತೆ ಮಾಡುತ್ತಾರೆ. ಇವರು ಹಸಿರು ಮತ್ತು ಕೇಸರಿ ಬಣ್ಣದ ಬಟ್ಟೆಯ ವಿಚಾರವನ್ನು ಇಟ್ಟುಕೊಂಡು ಮುತ್ತುಪ್ಪಾಡಿಯಲ್ಲಿ ಸಾಮರಸ್ಯದ ಬದುಕನ್ನು ಒಡೆದು ಹಾಕುವ ಕೆಲಸವನ್ನು ಮಾಡುತ್ತಾರೆ.ಇಂತಹ ಸಂದರ್ಭದಲ್ಲಿ, ಮುತ್ತುಪ್ಪಾಡಿಯಲ್ಲಿ ಹಿಂದೂ–ಮುಸ್ಲಿಂ ಸಾಮರಸ್ಯವನ್ನು ಸಾರುವ ಒಂದು ಪಾತ್ರವಾಗಿ ಕಾಣುವವನು.ಇಸ್ಟೇಟ್ ಖಾದರ್, ಇವರು ಕಾದಂಬರಿಯಲ್ಲಿ ತನ್ನ ತಳಮಳವನ್ನು ಈ ರೀತಿಯಾಗಿ ವ್ಯಕ್ತಪಡಿಸುತ್ತಾನೆ. ‘ನಾಲ್ಕು ಮರಗಳ ಮೇಲೆ ಹಸಿರು ಬಾವುಟ ಹಾರಿಸಿ ಬಿಟ್ಟೆ ಅಲ್ಲಾಹುವಿಗೆ ಸಂತೋಷ ಆಗ್ತದ? ಹಾಗೆ ಹಾರಿಸಿದವರಿಗೆ ಸ್ವರ್ಗ ಕೋಡ್ತೆನೆ ಅಂತ ಹೇಳಿದ್ದಾನಾ? ಯಾರಲ್ಲಿ ಹೇಳುವುದು?ತಮ್ಮ ಲಾಭಕೋಸ್ಕರ ಹಸಿರು, ಕೇಸರಿ ಬಣ್ಣದ ರಾಜಕಾರಣವನ್ನು ಮಾಡಿ, ಧರ್ಮದ ಪಾವಿತ್ಯತೆಯನ್ನು ಮಲಿನಗೊಳಿಸುವ ಕೆಲಸವನ್ನು ಮಾಡುತ್ತಾರೆ.ಆದರೆ ಯಾವುದೇ ರಾಜಕಾರಣ ನಡೆದರೂ, ಅದರ ಮೇಲೆ ಮನುಷ್ಯತ್ವ ಎಂಬ ಸಂಬಂಧ ಗೆಲ್ಲುತ್ತದೆ.ಇದರೊಂದಿಗೆ ಮುಸ್ಲಿಂ ಸಮಾಜದ ಹೆಣ್ಣಿನ ಸ್ಥಿತಿಯನ್ನು ವಿವರಿಸುತ್ತದೆ.ಮುತ್ತುಪ್ಪಾಡಿಯಲ್ಲಿರುವ ಶಿಕ್ಷಿತಳಾದ ಶಾಬಾನಾ ಮುಸ್ಲಿಮೇತರನನ್ನು ಮದುವೆಯಾದದ್ದೂ ಸರಿಯಲ್ಲ ಎಂದು ಜನ್ನಾತುಮ್ಮ ಹೇಳುತ್ತಾಳೆ.ಅದಕ್ಕೆ ಅವಳು ಕೊಡುವ ಕಾರಣ, ಮುಸ್ಲಿಂ ಹುಡುಗಿಯರನ್ನು ಶಾಲೆಗೆ ಕಳುಹಿಸುವುದೇ ಕಷ್ಟ, ಅಂತಹದ್ದರಲ್ಲಿ ಶಿಕ್ಷಣವನ್ನು ಪಡೆದ ನೀವೇ ಹೀಗೆ ಮಾಡಿದರೆ, ಹುಡುಗಿಯರನ್ನು ಶಾಲೆಗೆ ಕಳುಹಿಸಲು ಹೆದರುವಂತಹ ಸ್ಥಿತಿ ನಿರ್ಮಾಣವಾಗುತ್ತದೆ ಎಂಬುವುದು.ಇಲ್ಲಿ ಜನ್ನಾತುಮ್ಮ ವ್ಯಕ್ತಪಡಿಸುವ ಅಭಿಪ್ರಾಯವು ಸಮಾಜದ ಪ್ರಗತಿಯ ವಿರುದ್ಧವಾಗಿ ಅಲ್ಲ, ಬದಲಾಗಿ ಶಿಕ್ಷಣವನ್ನು ಪಡೆದು ಅದರಿಂದ ಆಗುತ್ತಿರುವ ಪರಿಣಾಮದ ಬಗೆಯಾಗಿದೆ.

ಕಾದಂಬರಿಯಲ್ಲಿ ಬರುವ ಸುಮತಿಯಕ್ಕನ ಪಾತ್ರ ಬಹಳ ವಿಶಿಷ್ಟವಾದುದು.ಅವಳು ಸಾಮಾನ್ಯ ಮನೆಗೆಲಸದ ಹೆಣ್ಣಾದರೂ, ಅಸಾಮಾನ್ಯ ಹೆಣ್ತನ, ತಾಯ್ತನ, ಮಾನವೀಯತೆಯನ್ನು ಅಳವಡಿಸಿಕೊಂಡ ಅಸಾಧಾರಣ ಪಾತ್ರವಾಗಿ ಮಿಂಚುತ್ತಾಳೆ.ಈ ಗುಣಗಳನ್ನು ಶಾಲೆ, ಕಾಲೇಜಿನ ಪಾಠದಿಂದ ತಿಳಿದುಕೊಂಡದ್ದಲ್ಲ. ತನ್ನ ಸ್ವಂತ ಅನುಭವದಿಂದ ಪಡೆದಿರುವಂತದ್ದು.ಕಾದಂಬರಿಯಲ್ಲಿ ಒಂದು ಕಡೆ ಸುಮತಿಯಕ್ಕನವರು, ಜನ್ನತ್ ಹಾಜಿಯವರ ಹೆಂಡತಿಯ ಗುಣವನ್ನು ವಿವರಿಸುವ ಸಂದರ್ಭದಲ್ಲಿ ಈ ರೀತಿ ಹೇಳುತ್ತಾಳೆ.ನಿಮ್ಮ ದೇವರಿಗೆ ಹೆಂಡತಿ ಇರುತ್ತಿದ್ದರೆ, ಅವರು ಜನ್ನಾತುಮ್ಮನ ಹಾಗೆ ಇರುತ್ತಿದ್ದರು, ಇದರಿಂದ ಕಾದಂಬರಿಕಾರರಿಗೆ ಹೆಣ್ಣಿನ ಬಗೆಗೆ ಇರುವ ವಿಶೇಷ ಕಾಳಜಿ, ಗೌರವವನ್ನು ತಿಳಿಸುತ್ತದೆ,

ಟಿವಿಯಲ್ಲಿ ಬಿತ್ತರಗೊಂಡ ರಾಮಾಯಣವು, ಮುತ್ತುಪ್ಪಾಡಿಯ ಗ್ರಾಮದ ಜನರ ಮೇಲೆ ಬೀರಿದ ಪ್ರಭಾವವನ್ನು ಕಾದಂಬರಿಯಲ್ಲಿ ವಿವರಿಸುತ್ತಾ ಹೋಗುತ್ತಾರೆ.ರಾಮಾಯಣದಲ್ಲಿ ಬರುವ ವಿವಿಧ ಪಾತ್ರಗಳನು ಮುತ್ತುಪ್ಪಾಡಿಯ ವಿವಿಧ ಜನರಿಗೆ ಹೋಲಿಕೆಯನ್ನು ಕೂಡ ಲೇಖಕರು ಮಾಡುತ್ತಾರೆ.ಇದರೊಂದಿಗೆ ಸುಮತಿಯಜ್ಜಿ, ಮತ್ತು ಚಾಂದ್ ಅಲಿಯ ನಡುವಿನ ನಂಟು, ಸುಮತಿಯಜ್ಜಿಯ ನಿಷ್ಕಲ್ಮಶ ಪ್ರೀತಿ, ಇದೇ ಪ್ರೀತಿ ಮುಂದೆ ಸುಮತಿಯಜ್ಜಿಯ ಸಾವಿನಲ್ಲಿ ಕೊನೆಯಾಗುವುದನ್ನು ಕೂಡ ಚಿತ್ರಿಸುತ್ತಾರೆ.ಚಾಂದಜ್ಜನಿಗೆ ಇರುವ ಮುತ್ತುಪ್ಪಾಡಿಯ ಮೇಲಿನ ಪ್ರೀತಿಯನ್ನು ಕೂಡ ವಿವರಿಸುತ್ತಾರೆ.ಒಂದು ಸಂದರ್ಭದಲ್ಲಿ ಚಾಂದಜ್ಜ ಮೊಮ್ಮಗಳು ಶಾಬಾನಾಳಿಗೆ ಈ ರೀತಿಯಾಗಿ ಹೇಳುತ್ತಾರೆ.'ನಿನಗೆ ಗೊತ್ತಿಲ್ಲ ಮಗು, ಇಲ್ಲಿ ಇರುವಷ್ಟು ಒಳ್ಳೆಯ ಜನರು ಎಲ್ಲಿಯೂ ಇರಲಿಕ್ಕೆ ಸಾಧ್ಯವಿಲ್ಲ'.ಅಲ್ಲಾಹುವಿನ ಸೃಷ್ಟಿಯಲ್ಲಿ ಜನ್ನತ್ ಅಂತ ಇದ್ದರೆ ಅದು ಈ ಮುತ್ತುಪ್ಪಾಡಿ ಮಾತ್ರ ನಾನು ಈ ಊರನ್ನು ಬಿಟ್ಟುಹೊರಡುವುದು ಖಬರ್ ಗುಂಡಿಗೆ ಮಾತ್ರ'.

'ಸ್ವಾತಂತ್ರ್ಯದ ಓಟದಲ್ಲಿ ಧರ್ಮವೆಂಬುದು ಹುಟ್ಟಿನಿಂದ ಬಂದದ್ದಾಗಿರದೆ, ಜಾತ್ಯಾತೀತತೆಯ ಸಂಕೇತವಾಗಿದೆ.ಚಾಂದಜ್ಜನವರು ಕಾದಂಬರಿಯ ಉದ್ದಕ್ಕೂ ಅದನ್ನು ನಿರೂಪಿಸುತ್ತಾ ಸಾಗುತ್ತಾರೆ.ಅವರು ಸುಮಾರು ಐವತ್ತು ವರ್ಷಗಳ ಜೀವನದಲ್ಲಿ ಮುತ್ತುಪ್ಪಾಡಿಯಲ್ಲಿ ಕಂಡದ್ದು, ಅನುಭವಿಸಿದ್ದು, ಬಾಳಿದ್ದು ಇದೇ ಜಾತ್ಯಾತೀತ ಧರ್ಮದಲ್ಲಿ.ಭಾರತದ ವಿಭಜನೆಯ ಸ್ವಾತಂತ್ರ್ಯದಿಂದ ಆರಂಭವಾದ ಅವರ ಓಟ, ನಿಲುಗಡೆ ಕಾಣದೆ ಓಡುತ್ತಲೇ ಇದೆ.ದೇಶ ಇಬ್ಭಾಗವಾದಗಿನಿಂದ ಸುಮಾರು 50 ವರ್ಷಗಳವರೆಗೆ ಭಾರತದಲ್ಲಿ ನಡೆದ ಅರ್ಥಿಕ, ಸಾಮಾಜಿಕ, ಧಾರ್ಮಿಕ ವಿಚಾರಗಳ ವಿವರಣೆಯೇ ಈ ಕಾದಂಬರಿ. ಭಾರತ ದೇಶ ಇದೇ ರೀತಿ ಇರಬೇಕು ಎನ್ನುವ ಚಿತ್ರಣವನ್ನು ಕಾದಂಬರಿಯಲ್ಲಿ ಕಾದಂಬರಿಕಾರರು ಮುತ್ತುಪ್ಪಾಡಿಯನ್ನು ಉದಾಹರಣೆಯಾಗಿಸಿ ಚಿತ್ರಿಸಿದ್ದಾರೆ.

ಸ್ವಾತಂತ್ರ್ಯದ ಓಟ ಕಾದಂಬರಿಯು ಕೇವಲ ಕಥೆಯಲ್ಲ ಬದಲಾಗಿ ಭಾರತದ ಇತಿಹಾಸದಲ್ಲಿ ಸಂಬಂಧಿಸಿದ ಒಂದು ನೈಜ ಘಟನೆಯನ್ನು ತನ್ನ ಊಹೆಯ ಮುಖಾಂತರ ವಿವರಿಸಿದ್ದಾರೆ. ಕಾದಂಬರಿಯಲ್ಲಿ ಬರುವ ಯಾವ ಪಾತ್ರವೂ ಕೂಡ ಮಿತಿಯನ್ನು ಮೀರಿಲ್ಲ. ಮುತ್ತುಪ್ಪಾಡಿಯಲ್ಲಿ ಎಲ್ಲಾ ಘಟನೆಗಳು ನಡೆದಿದೆ. ಆದರೆ, ಇದು ಹಿಂದೂ–ಮುಸ್ಲಿಂ ಏಕತೆಯ ಸಂಕೇತವಾಗಿ ಇಡೀ ದೇಶಕ್ಕೆ ಒಂದು ಮಾದರಿಯಾಗಿದೆ.ಅದರೊಂದಿಗೆ ಜಾತಿಯನ್ನು ಅಸ್ತ್ರವಾಗಿಸಿಕೊಂಡು, ರಾಜಕಾರಣ ಮಾಡುವವರಿಗೆ ತಮ್ಮನ್ನು ತಾವು ಪರೀಕ್ಷೆಗೆ ಒಳಪಡಿಸಿಕೊಳ್ಳಬೇಕಾದ ಸ್ಥಿತಿಯನ್ನು ನಿರ್ಮಾಣ ಮಾಡುತ್ತದೆ.ವಾಘಾ ಗಡಿಯಿಂದ ಪ್ರಾರಂಭವಾಗುವ ಕಥಾನಾಕ ಅಲ್ಲೇ ಕೊನೆಯಾಗುತ್ತದೆ.ಇದು ಕೇವಲ ಚಾಂದಜ್ಜನ ಕಥೆ ಮಾತ್ರವಲ್ಲ, ಇಡೀ ದೇಶದ ಸ್ಥಿತಿಗತಿಗಳನ್ನು ಯಾವುದೇ ಜಾತಿಗೆ ಸೀಮಿತಗೊಳ್ಳದೆ ಸ್ಥಳೀಯತೆಯಲ್ಲಿ

ಚಿತ್ರಿಸುತ್ತಾ ಹೋಗಿದ್ದಾರೆ. ಹಾಗಾಗಿ ಈ ಕಾದಂಬರಿಯು ಈ ಕಾಲದ ಬಹಳ ಪ್ರಮುಖವಾದ ಕಾದಂಬರಿಯಾಗಿದೆ.

ಕಾದಂಬರಿಯಲ್ಲಿ ಬರುವ ಕಥಾನಕವು ಐತಿಹಾಸಿಕ ಘಟನೆಗೆ ಸಂಬಂಧಿಸಿರುವುದು ಮಾತ್ರವಲ್ಲದೆ, ಅಧ್ಯಯನಕ್ಕೆ ಬೇಕಾದ ಎಲ್ಲಾ ರೀತಿಯ ಮಾಹಿತಿಯನ್ನು ನೀಡುತ್ತದೆ. ಸಾಮಾಜಿಕ ಜೀವನ, ಮಹಿಳೆಯ ಸ್ಥಾನಮಾನ, ಕೋಮುವಾದ ಮತ್ತು ಮೂಲಭೂತವಾದ ಇದೆಲ್ಲವುಗಳ ಸಮ್ಮಿಲಿತವಾದ ಮಿಶ್ರಣವೇ ಸ್ವಾತಂತ್ರ್ಯದ ಓಟ. ಹಾಗಾಗಿ ಈ ಕಾದಂಬರಿಯು ಅಧ್ಯಯನಕ್ಕೆ ದೊರೆತ ಬಹುಮುಖ್ಯವಾದ ಆಕರವಾಗಿದೆ.

ಅಧ್ಯಯನದ ಹಿನ್ನೆಲೆಯಲ್ಲಿ ಬೋಳುವಾರು ಮಹ್ಮಮದ್ ಕುಂಞಿಯವರ 'ಓದಿರಿ' ಕಾದಂಬರಿಯು ವಿಭಿನ್ನವಾದ ಮುಸ್ಲಿಂ ಇತಿಹಾಸದ ಮಾಹಿತಿಯನ್ನು ನೀಡುತ್ತದೆ. ಮತ್ತು ಮುತ್ತುಪ್ಪಾಡಿ ಪುಸ್ತಕ ಪ್ರಕಟಣೆಯಡಿಯಲ್ಲಿ 2015ರಲ್ಲಿ ಕೃತಿಯು ಪ್ರಕಟವಾಯಿತು. ಈ ಕಾದಂಬರಿಯು ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಮುಸ್ಲಿಂ ಇತಿಹಾಸವು ಮೂಡಿ ಬರುವ ವಿಭಿನ್ನ ಪರಿಗಳನ್ನು ಕುರಿತು ಚರ್ಚಿಸುತ್ತದೆ. ಇದನ್ನು ವ್ಯಕ್ತ ಪಡಿಸಿದ ಸಾಹಿತಿಗಳು ವೃತ್ತಿಪರ ಇತಿಹಾಸಕಾರರಲ್ಲ, ಅಂದರೆ ಇತಿಹಾಸ ಜ್ಞಾನವನ್ನು ಕಟ್ಟುವ ವೃತ್ತಿಯವರಲ್ಲ, ಇವರು ವೃತ್ತಿಪರ ಇತಿಹಾಸಕಾರರಿಂದ ಸಿದ್ಧವಾದ ಇತಿಹಾಸದ ವಿವರಗಳನ್ನು ತಮ್ಮ ನಿಜಗಳನ್ನಾಗಿ ಸ್ವೀಕರಿಸಿ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಅದನ್ನು ಅಭಿವ್ಯಕ್ತಗೊಳಿಸಿದ್ದಾರೆ. ತಮ್ಮ ಇತಿಹಾಸ ಗ್ರಹಿಕೆಯನ್ನು ಇವರು ಕಥನ ಕಲೆಯ ಮೂಲಕ ಶೋಧಿಸುವ ಕೆಲಸವನ್ನು ನಡೆಸುತ್ತಾರೆ.

ಕನ್ನಡದ ಸೃಜನಶಿಲ ಬರಹಗಾರರಾದ ಬೋಳುವಾರು ಮಹಮ್ಮದ್ ಕುಂಞಿ ಅವರ ಅವರ ಮೂರನೇ ಕಾದಂಬರಿ 'ಓದಿರಿ'ಯಲ್ಲಿ ಪ್ರವಾದಿ ಮಹಮ್ಮದರ ಜೀವನವನ್ನು ಜನಪದ ನಾಯಕನೋರ್ವನ ಜೀವನದ ಶೈಲಿಯಲ್ಲಿ ಕಟ್ಟಿಕೊಟ್ಟಿದ್ದಾರೆ.ಆ ಮೂಲಕ ಇದು ಬೇರೆಲ್ಲಾ ಕೃತಿಗಳಿಗಿಂತ ಭಿನ್ನವಾಗಿರುತ್ತದೆ, ಹಾಗೂ ಮುಖ್ಯವಾಗುತ್ತದೆ.ಈ ಕಾದಂಬರಿಯನ್ನು ಒಟ್ಟು ಮೂರು ಹಂತದಲ್ಲಿ ನಾವು ಅರ್ಥೈಸಿಕೊಳ್ಳಬಹುದು. ಬಾಲಕ ಮಹಮ್ಮದ್‌ರು ನಿಧಾನಗತಿಯಲ್ಲಿ ಬೆಳೆದು ರೂಪುಗೊಳ್ಳುವುದರ ಜೊತೆಗೆ ಅವರಿಗೆ ಪ್ರವಾದಿತನ ದೊರಕುವುದು ಮಾತ್ರವಲ್ಲದೆ, ತನ್ನೊಳಗೆ ಬೆಳೆದುಕೊಳ್ಳುವ ಚಿಂತನೆಗಳು, ಆಲೋಚನೆಗಳು, ತತ್ವಗಳನ್ನು ಮೊದಲನೇ ಭಾಗದಲ್ಲಿ ಅಥವಾ ಹಂತದಲ್ಲಿ ತಿಳಿಸಿದರೆ, ಇಡೀ ಮುಕ್ಕಾ ಸಮಾಜಕ್ಕೆ ತಾನು ಅಲ್ಲಾಹನ ಪ್ರವಾದಿ ಹಾಗೂ ಇಸ್ಲಾಂ ಧರ್ಮದ ಅಂತಿಮ ಪ್ರವಾದಿಯಾಗಿರುತ್ತೇನೆ ಎಂದು ಬಹಿರಂಗಗೊಳಿಸುವುದರ ಜೊತೆಗೆ ಮಕ್ಕಾದಲ್ಲಿ ನೆಲೆನಿಂತಿರುವ ಇತರ ಧರ್ಮದವರು ಮಹಮ್ಮದರನ್ನು ಕಾಣುವ ರೀತಿಯನ್ನು ಎರಡನೇ ಭಾಗದಲ್ಲಿ ತಿಳಿಸಿದ್ದಾರೆ. ನಂತರದಲ್ಲಿ ಮಹಮ್ಮದರು ಪ್ರವಾದಿಯಾಗಿ ಕಂಡುಕೊಂಡ ಇಸ್ಲಾಂ ಧರ್ಮದ ಸತ್ಯವನ್ನು, ತನ್ನ ಧರ್ಮದಲ್ಲಿ ಅನುಷ್ಠಾನಗೊಳಿಸಿ,

ಈಗಾಗಲೇ ತನ್ನ ಧರ್ಮದಲ್ಲಿ ಬೇರೂರಿರುವ ಅಂಧಶ್ರದ್ಧೆಯಲ್ಲಿ, ಮೂಢನಂಬಿಕೆಗಳನ್ನು ತೆಗೆದುಹಾಕಲು ಅವರು ನಡೆಸಿದ ಹೋರಾಟ, ಕಷ್ಟ-ನಷ್ಟಗಳು ಎದುರಿಸಿದ ಸವಾಲು ಮತ್ತು ಅದೆಲ್ಲದರ ಪರಿಣಾಮವಾಗಿ, ಅಂತ್ಯದಲ್ಲಿ ಪ್ರವಾದಿ ಮಹಮ್ಮದರಿಗೆ ದೊರೆತ ಗೆಲುವು ಇವೆಲ್ಲವನ್ನು ಮೂರನೇಯ ಭಾಗದಲ್ಲಿ ಅತ್ಯಂತ ವಿವರಣಾತ್ಮಕವಾಗಿ ಚಿತ್ರಿಸುತ್ತಾ ಹೋಗಿದ್ದಾರೆ.

'ಮತ್ತೊಮ್ಮೆ ಕೇಳಿಸಿತ್ತು: ನೇರವಾಗಿ ಆಕಾಶದಿಂದ ಭೂಮಿಗೆ ಇಳಿದು ಬಂದಂತಿದ್ದ ಆಧ್ವನಿ.ಸಂಶಯವೇ ಇಲ್ಲ, ಆರು ತಿಂಗಳ ಹಿಂದೆ ಇದೇ 'ಹಿರಾ' ಗುಹೆಯೊಳಗಿನ ಕತ್ತಲಲ್ಲಿ ಕುಳಿತು ಧ್ಯಾನಿಸುತ್ತಿದ್ದಾಗ, ಎದೆ ಝುಲ್ಲೆನ್ನಿಸುವಂತೆ ಬೆಚ್ಚಿಬಿಳಿಸಿದ್ದೇ ಅದೇ ಕಂಚಿನ ಕಂಠದ ಧ್ವನಿ.ನನಗೆ ಓದಲು ತಿಳಿಯದು; ನಲುವತ್ತರ ಹೊಸ್ತಿಲಲ್ಲಿ ನಿಂತಿದ್ದ ಮಹಮ್ಮದರು ಗಾಬರಿಯಿಂದಲೇ ತೊದಲಿದ್ದರು. ಅದು ನಿಜವು ಆಗಿತ್ತು. ಬೋಳುವಾರು ಮಹಮ್ಮದ್ ಕುಂಞ ಅವರ ಮೂರನೇ ಕಾದಂಬರಿ 'ಓದಿರಿ'ಯ ಪ್ರಥಮ ಪುಟದ ಸಾಲುಗಳಿವು ಪ್ರವಾದಿ ಮಹಮ್ಮದರ ಜೀವನ ಅರಿತವರಷ್ಟೆ ಅಲ್ಲದೆ ಹೊಸಬರೂ ಸಹ ಸುಲಭವಾಗಿ ಅರ್ಥೈಸಿಕೊಳ್ಳಬಹುದಾದ ರೀತಿಯಲ್ಲಿ ಈ ಕಾದಂಬರಿ ಮೂಡಿಬಂದಿದೆ, ಪೂರ್ಣವಾಗಲ್ಲದಿದ್ದರೂ ಪ್ರವಾದಿಯನ್ನು ತುಸು ಮಟ್ಟಿಗಾದರೂ ಕನ್ನಡದ ಓದುಗರಿಗೆ ಪರಿಚಯಿಸುವ, ಹತ್ತಿರವಾಗಿಸುವ ಕೆಲಸವನ್ನು 'ಓದಿರಿ' ಮಾಡುತ್ತಿದೆ. ಇಲ್ಲಿ ನಾವು ಗಮನಿಸಬೇಕಾದುದೇನೆಂದರೆ ಶುದ್ಧಾನುಶುದ್ಧ ಕಾದಂಬರಿಯೇ ಹೊರತು ಧಾರ್ಮಿಕ ಪ್ರಜ್ಞೆಯ ಭಾರದಿಂದ ರೂಪಿತವಾಗಿರುವ ಪುಸ್ತಕವಲ್ಲ.

ಹುಟ್ಟುವ ಮೊದಲೇ ತಂದೆಯನ್ನು, ಎಂಟು ವರ್ಷ ತುಂಬುವ ಮುನ್ನವೇ ತಾಯಿಯನ್ನೂ ಕಳೆದುಕೊಂಡ ನಿರ್ಗತಿಕ ಬಾಲಕನೊಬ್ಬ ಅನಂತರದ ಮೊದಲೆರಡು ವರ್ಷ ಬದುಕಿದ್ದು ತಾತ ಅಬ್ದುಲ್ ಮುತ್ತಲಿಬರ ಆಶ್ರಯದಲ್ಲಿ ತಾತನ ಮರಣದ ಬಳಿಕ ಸೇರಿಕೊಂಡದ್ದು ದೊಡ್ಡಪ್ಪ ಅಬೂತಾಲಿಬರ ಮನೆಗೆ. ಹೀಗೆ ಬಾಲ್ಯವನ್ನು ದೊಡ್ಡಪ್ಪನವರ ಆಡುಗಳನ್ನು ಮೇಯಿಸುವ ಆಳುಮಗನಾಗಿ ಮುಂದೆ ಅವರದೆ ವ್ಯಾಪಾರಿ ಮಳಿಗೆಯಲ್ಲಿ ಸಹಾಯಕವಾಗಿ ದುಡಿಯುತ್ತಾ ಯೌವನವನ್ನೆಲ್ಲಾ ಕಳೆದುಕೊಂಡಿದ್ದರೆ, ಓದುವುದಾದರೂ ಹೇಗೆ? ಅಕ್ಷರವನ್ನುಳಿದು ಮಿಕ್ಕೆಲ್ಲಾ ವಿದ್ಯೆಗಳನ್ನು ಕಲಿಸಲು ಹಠ ಹಿಡಿದವರಂತಿದ್ದ ದೊಡ್ಡಪ್ಪ ಅಬೂತಾಲಿಬರು, ತಮ್ಮ ಸೋದರ ಪುತ್ರನಿಗೆ ಹನ್ನೆರಡಾಗುತ್ತಿರುವಂತೆಯೇ ತಮ್ಮ ವರ್ತಕ ತಂಡದಲ್ಲಿ ಸಹಾಯಕನಂತೆ ಇರಿಸಿಕೊಂಡು ಪರದೇಶಗಳಿಗೆ ಕರೆದುಕೊಂಡು ಹೋಗಲಾರಂಭಿಸಿದರೆ ಬರಹ ಕಲಿಯುವುದಾದರೂ ಹೇಗೆ?

ಇಂದು ಜಗದಗಲ ಹರಡಿಕೊಂಡಿರುವ ಸುನ್ನಿ, ಶಿಯಾ ಮುಂತಾದ ಎಲ್ಲಾ ಪ್ರಮುಖ ಶಾಖೆಗಳೂ ಶಾಫಿ, ಹನಫಿ, ಮಾಲಿಕಿ, ಸೂಫಿ, ಇತ್ಯಾದಿ ಪಂಗಡಗಳು ಸಲಫಿ, ಜಮಾತೆ, ಇಸ್ಲಾಮೀ, ತಬ್ಲಿಗ್ ಜಮಾತ್

ಇತ್ಯಾದಿ ಉಪಪಂಗಡಗಳಿಗೆ ಅಂಟಿಕೊಂಡಿರುವ ಮುಸ್ಲಿಂಮರೂ ಪವಿತ್ರ ಕುರುಆನ್‌ನಲ್ಲಿ ದಾಖಲಾಗಿರುವ ಆಯತ್‌ಗಳೆಲ್ಲವನ್ನು ಅಪೌರುಷೇಯವೆಂದು ಅವುಗಳೇ ಅಂತಿಮ ಸತ್ಯವೆಂದು ಪ್ರಶ್ನಾತೀತವಾಗಿ ನಂಬುತ್ತಾರೆ. ಇಸ್ಲಾಂ ಧರ್ಮ ನಿಂತಿರುವುದೇ ಆ ನಂಬಿಕೆಯ ಪಂಚಾಂಗದ ಮೇಲೆ ಆದರೆ ಪ್ರವಾದಿಯವರ ಸಂಗಾತಿಗಳೇ ಸ್ವತ: ದಾಖಲಿಸಿದ್ದಾರೆ ಎಂದು ನಂಬಲಾಗುವ ಹದೀಸ್‌ಗಳ ಬಗ್ಗೆ ಈ ರೀತಿಯ ಒಮ್ಮತವಿಲ್ಲ.

ಅಂತಿಮ ಸತ್ಯ ನಮ್ಮದೇ ಎಂಬ ವಾದ–ವಿವಾದಗಳೊಂದಿಗೆ ಮುಸ್ಲಿಂ ಹಾಗೂ ಮುಸ್ಲಿಮೇತರ ವಿದ್ವಾಂಸರು ಬರೆದಿರುವ ಸಾವಿರಾರು ಗ್ರಂಥಗಳು ವಿದೇಶಿ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿವೆ. ಮುಸ್ಲಿಂ ವಿದ್ವಾಂಸರು ರಚಿಸುರುವ ಎಲ್ಲಾ ಕೃತಿಗಳಲ್ಲಿ ಎದ್ದು ಕಾಣಿಸುವ ಪ್ರಧಾನ ಗುಣವೆಂದರೆ, ಮೂಲ ಅರೆಬಿಕ್ ಕೃತಿಗಳಿಗೆ ಒಂದಿಷ್ಟೂ ಅಪಚಾರವಾಗದಂತೆ ವಹಿಸಿರುವ ಭಯಭರಿತ ಎಚ್ಚರ ಮತ್ತು ಬರವಣಿಗೆಯನ್ನು ತಮ್ಮ ಆರಾಧ್ಯನಿಗೆ ಸಲ್ಲಿಸಲಾಗುವ ಮತ್ತೊಂದು ಉಪಾಸನೆಯೆಂದೇ ಬಗೆದು ಅನುಭವಿಸಿದ ಧನ್ಯತೆ.

ಆದ್ದರಿಂದಲೇ ಈ ಎಲ್ಲಾ ಕೃತಿಗಳು ಕೊಡುವ ವಿವರಗಳಲ್ಲಾಗಲೀ, ಚಾರಿತ್ರಿಕ ಘಟನೆಗಳ ದಾಖಲೆಗಳಲ್ಲಾಗಲಿ, ಅವುಗಳ ಕಾಲಾನುಕ್ರಮಣಿಕೆಯಲ್ಲಾಗಲಿ ಅಂತಹ ವ್ಯತ್ಯಾಸಗಳೇನೋ ಕಾಣಸುವುದಿಲ್ಲ ಆದರೆ ಈ ಕಾದಂಬರಿಯಲ್ಲಿ ಆ ಎಲ್ಲ ಪಂಗಡಗಳ ನಂಬಿಕೆಗಳನ್ನು ಸಾಧ್ಯವಾದಷ್ಟು ಕಲಸಿ, ಬೆರೆಸಿ ಮಟ್ಟ ಮೀರಿ ಹರಿಯದಂತೆ ಕತೆ ಹೆಣೆದಿದ್ದಾರೆ.

ಸಾರಾ ಅಬೂಬಕ್ಕರ್‌ರವರು ಹೆಣ್ಣು ಮಕ್ಕಳ ಜೀವನ ಚರಿತ್ರೆಯನ್ನು ಅವರು ಎದುರಿಸುವ ಸವಾಲುಗಳನ್ನು ತನ್ನ ಕಾದಂಬರಿಗಳಿಗೆ ವಿಷಯವಾಗಿ ಆರಿಸಿಕೊಂಡು ಅನೇಕ ಕಾದಂಬರಿಗಳನ್ನು ಬರೆದಿದ್ದಾರೆ.ಇವರು ಬರೆದಿರುವ 'ಚಂದ್ರಗಿರಿ ತೀರದಲ್ಲಿ' ಎಂಬ ಕಾದಂಬರಿಯು, ಕನ್ನಡ ಸಾಹಿತ್ಯ ಲೋಕಕ್ಕೆ ಒಂದು ಅದ್ಭುತವಾದ ಕೊಡುಗೆಯಾಗಿದೆ.ಮುಸ್ಲಿಂ ಸಮುದಾಯದ ಹೆಣ್ಣು ಮಗಳು ಎದುರಿಸುವ ತಲಾಖ್ ಎಂಬ ಗಂಭೀರವಾದ ಸಮಸ್ಯೆಯನ್ನು ಇಲ್ಲಿ ಚರ್ಚಿಸುತ್ತಾರೆ. ಹೆಚ್ಚಾಗಿ ತನ್ನ ಸಮುದಾಯದಲ್ಲಿ ನಡೆಯುವ ನೈಜ ಘಟನೆಯನ್ನೇ ತನ್ನ ಕಾದಂಬರಿಯಲ್ಲಿ ವಿವರಿಸಿದ್ದಾರೆ. ತಲಾಖ್ ಎನ್ನುವ ಪದ್ಧತಿಯೂ ಮುಸ್ಲಿಂ ಸಮುದಾಯದಲ್ಲಿ ಹೇಗೆ ಪ್ರಚಲಿತದಲ್ಲಿದೆ. ಇಸ್ಲಾಮಿನ ಪವಿತ್ರ ಗ್ರಂಥವಾದ ಕುರಾನ್, ತಲಾಖ್‌ನ ಬಗ್ಗೆ ಯಾವ ವಿವರಣೆಯನ್ನು ನೀಡಿದೆ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ.ಆದರೆ ಇಂದು ಈ ಪದ್ಧತಿಯೂ, ಯಾವ ರೀತಿಯಲ್ಲಿ ತಪ್ಪು ರೀತಿಯಲ್ಲಿ ಬಳಕೆಯಾಗುತ್ತಿದೆ ಎಂಬುದನ್ನು ಸಮಾಜಕ್ಕೆ ತಿಳಿಸುವ ಪ್ರಯತ್ನವನ್ನು ಸಾರಾ ಅಬೂಬಕ್ಕರ್‌ರವರು ಮಾಡಿದ್ದಾರೆ.

ತಲಾಖ್ ಎನ್ನುವ ಪದ್ಧತಿಯಿಂದ ಮಹಿಳೆಯೂ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾಳೆ ಇಲ್ಲಿ ಹೆಚ್ಚು ತೊಂದರೆಗಳನ್ನು ಎದುರಿಸುವವಳು ಮಹಿಳೆ.ಈ ಎಲ್ಲಾ ವಿಚಾರಗಳು ನನ್ನ ಅಧ್ಯಯನಕ್ಕೆ ಬಹಳ ಉಪಯುಕ್ತವಾದ ಆಕರವಾಗಿದೆ.ಮುಸ್ಲಿಂ ಮಹಿಳಾ ಸ್ಥಿತಿಗತಿಯನ್ನು ವಿವರಿಸುವ ಸಂದರ್ಭದಲ್ಲಿ ಮಹಿಳೆಯ ಜೀವನದ ವಿವಿಧ ಹಂತಗಳ ಸವಾಲುಗಳನ್ನು, ಗೆಲುವುಗಳನ್ನು ವಿವರಿಸುವ ಹೋಗುವಾಗ, ಈ ಕಾದಂಬರಿಯೂ ಮುಖ್ಯವಾದ ಮಾಹಿತಿಗಳನ್ನು ನೀಡುತ್ತದೆ.ತಲಾಖ್ ಎಂಬುವುದು ಒಂದು ಸಾಮಾನ್ಯವಾದ ವಿಚಾರವಲ್ಲ. ಹಾಗಾಗಿ ಸಾರಾ ಅಬೂಬಕ್ಕರ್‌ರವರ ಈ ಕಾದಂಬರಿಯೂ ಅಧ್ಯಯನಕ್ಕೆ ಮಾಹಿತಿಯನ್ನು ಒದಗಿಸಬಲ್ಲ ಬಹುಮುಖ್ಯವಾದ ಆಕರವಾಗಿದೆ.

ರೈಹಾನ ಎಂ ಮೈದಿನ್ ಮತ್ತು ಇತರ ಬರಹಗಾರರು ಒಟ್ಟು ಸೇರಿ ಬರೆದಿರುವ 'ಮುಸ್ಲಿಂ ವುಮೆನ್ ಇನ್ ಸೌತ್ ಇಂಡಿಯಾ ರೀಡಿಂಗ್ ಸೆಲೆಕ್ಟೆಡ್ ನರೆಟಿವ್ಸ್ ಅಫ್ ಸಾರಾ ಅಬೂಬಕ್ಕರ್' ಎಂಬ ಲೇಖನವು ಸಂಪೂರ್ಣವಾಗಿ ಮುಸ್ಲಿಂ ಸಮಾಜದ ಮಹಿಳೆಯ ಸ್ಥಿತಿಯನ್ನು ಸಾರಾ ಅಬೂಬಕ್ಕರ್‌ರವರ ಬರಹಗಳ ಆಧಾರದ ಮೇಲೆ ಚರ್ಚೆಯನ್ನು ನಡೆಸುತ್ತದೆ. ದಕ್ಷಿಣ ಭಾರತದ ಬಹುಸಂಸ್ಕೃತಿಯ ನೆಲೆಯಲ್ಲಿ ಮುಸ್ಲಿಂ ಮಹಿಳೆಯ ಬೆಳವಣಿಗೆಯ ಅಸ್ಮಿತೆಯನ್ನು ಕುರಿತು ಈ ಲೇಖನವು ಮಾಹಿತಿಯನ್ನು ನೀಡುತ್ತದೆ. ಸಾರಾ ಅಬೂಬಕ್ಕರ್‌ರವರ ಕೃತಿಗಳಲ್ಲಿ ದಕ್ಷಿಣ ಏಷ್ಯಾದ ಮಹಿಳೆಯರು ಮತ್ತು ಜನಾಂಗಿಯತೆ, ಧರ್ಮ, ಲಿಂಗದ ಪರಸ್ಪರ ಛೇದನೆ, ಅದರೊಂದಿಗೆ ಸಾರಾ ಅಬೂಬಕ್ಕರ್‌ರವರ ಕೃತಿಗಳಲ್ಲಿ ಸಮಸ್ಯಾತ್ಮಕವಾದ ತಲಾಖ್ ಬಹುಪತ್ನಿತ್ವ ಮತ್ತು ಪರ್ದಾ ಪದ್ಧತಿಯ ಚರ್ಚೆಯನ್ನು ನಡೆಸಿದ್ದಾರೆ ಹಾಗಾಗಿ ಈ ಲೇಖನವು ಇಸ್ಲಾಂ ಧರ್ಮದ ವಿವಿಧ ವಿಷಯಗಳ ಬಗೆಗೆ ಬೆಳಕನ್ನು ಚೆಲ್ಲುತ್ತದೆ.

ಬೋಳುವಾರು ಮಹಮ್ಮದ್ ಕುಂಞಯವರ ಮತ್ತೊಂದು ಐತಿಹಾಸಿಕ ಕಾದಂಬರಿ 'ಉಮ್ಮ' ಈ ಕಾದಂಬರಿಯು ಪ್ರವಾದಿ ಮಹಮ್ಮದರ ಮೂರನೇ ಪತ್ನಿ ಆಯಿಷಾರ ಜೀವನ ಚರಿತ್ರೆ. ಪ್ರವಾದಿ ಪತ್ನಿಯರ ಜೊತೆಗೆ ಏಳನೇ ಶತಮಾನದ ಅರಬ್ ದೇಶದ ಮಹಿಳೆಯರ ಜೀವನದ ಜೊತೆಗೆ ಆ ಕಾಲದ ಇತಿಹಾಸವನ್ನು ಮರುನಿರೂಪಿಸುವ ಕೆಲಸವನ್ನು ಬೋಳುವಾರು ಮಹಮ್ಮದ್ ಕುಂಞಿಯವರು ಈ ಕೃತಿಯಲ್ಲಿ ಮಾಡಿದ್ದಾರೆ. ಆರನೇಯ ವಯಸ್ಸಿನಲ್ಲಿ ಪ್ರವಾದಿ ಮಹಮ್ಮದ್‌ರೊಂದಿಗೆ ವಿವಾಹವಾಗುವ ಆಯಿಷಾರವರು ಜೀವನದ ಬಗೆಗೆ ವಿವರಣೆಯನ್ನು ನೀಡುತ್ತಾ ಹೋಗುತ್ತಾರೆ. ಇಲ್ಲಿ ಇಡಿ ಕಾದಂಬರಿಯ ಜೀವಾಳವಾಗಿರುವ ಆಯಿಷಾರವ ಜೊತೆಗೆ, ಅಷ್ಟೇ ಪ್ರಾಶಸ್ತ್ಯವನ್ನು ಪಡೆದಿರುವ ಪಾತ್ರ 'ಅಫೀರಾ'.ಈ ಪ್ರಾತವು ಕಾದಂಬರಿಯಲ್ಲಿ ಉತ್ಸಾಹದ ಚಿಲುಮೆಯಾಗಿ ಮೂಡಿಬಂದಿದೆ. ಮದುವೆಯಾಗಿ ನಾಲ್ಕು ವರ್ಷಕ್ಕೆ ತನ್ನ ಗಂಡನನ್ನು ಕಳೆದುಕೊಂಡರೂ.ಇನ್ನೊಂದು ವಿವಾಹವಾಗದೆ ತನ್ನ ಒಡತಿಯ ಸೇವೆಗೆ ಸಿದ್ಧಳಾಗುತ್ತಾಳೆ. ಒಡತಿಗೆ ಹುಟ್ಟಿದ ಆ ಮಗುವೇ ಆಯಿಷಾ. ಮುಂದೆ ಇವರಿಬ್ಬರ ನಡುವಿನ ಸಂಬಂಧದ ಬಗೆಗೆ ಅದ್ಭುತವಾಗಿ ಲೇಖಕರು ಚಿತ್ರಿಸುತ್ತಾ ಹೋಗಿದ್ದಾರೆ.ಇಲ್ಲಿ ಬರುವ ಇನ್ನೊಂದು ಬಹಳ ಮುಖ್ಯ

ಪಾತ್ರ ಹಿಂದ್‌ಳದು. ಇವರು ಕುರೈಶ್ ಗೋತ್ರದ ನಾಯಕ ಅಬೂಸೂಫಿಯಾನದ ಹೆಂಡತಿ.ಬದರ್ ಯುದ್ಧದ ಸಂದರ್ಭದಲ್ಲಿ ಇವರ ತಂದೆಯು, ಪ್ರವಾದಿ ಮಹಮ್ಮದ್‌ರ ಚಿಕ್ಕಪ್ಪ ಹಂಝಾರ ಕೈಯಲ್ಲಿ ಮರಣವನ್ನು ಹೊಂದುತ್ತಾರೆ.ಇದರ ವಿರುದ್ಧ ಸೇಡನ್ನು ತೀರಿಸಿಕೊಳ್ಳಲು ಹಿಂದ್‌ರವರು ಮಾಡುವ ಭಾಷಣ ಅಧ್ಭುತವಾದದು. ಕುರೈಶ್ ಗೋತ್ರದ ಮಹಾನ್‌ನಾಯಕರ ಎದುರು ನಿಂತು ಅವಳಾಡುವ ಮಾತುಗಳು ಕುರೈಶ್ ಸರದಾರರನು ಬಡಿದೆಬ್ಬಿಸುವ ಕೆಲಸವನು ಮಾಡುವುದಲ್ಲದೆ.ಕುರೈಶ್ ಸರದಾರರ ನಡುವೆ ಇದ್ದ ಕಪ್ಪು ಗುಲಾಮನನ್ನು ಹಂಝಾರನ್ನು ಕೊಲ್ಲಿಸಲು ಸಿದಪಡಿಸುವ ರೀತಿಯನ್ನು ಲೇಖಕರು ಬಹಳ ಅದ್ಭುತವಾಗಿ ವಿವರಿಸಿದ್ದಾರೆ. ಮುಂದೆ ಊಹುದ್ ಯುದ್ಧದಲ್ಲಿ ಇದೇ ಗುಲಾಮನಿಂದ ಹಂಝಾರವರ ಕೊಲೆಯು ಆಗುತ್ತದೆ.

ಮುಂದೆ ಅಬೂ ಆಸ್ ಎನ್ನುವ ಪಾತ್ರವು ಈ ಕಾದಬರಿಯು ಮತ್ತೊಂದು ಆಕರ್ಷಣೆ.ಇವರು ಪ್ರವಾದಿ ಮಹಮ್ಮದ್‌ರ ಪ್ರೀತಿಯ ಮಗಳಾದ ಝೈನಬ್‌ರ ಪತಿ. ಇವರು ಕುರೈಶ್ ಗೋತ್ರಕ್ಕೆ ಸೇರಿದವರು ಬದರ್ ಯುದ್ಧದಲ್ಲಿ ಬಂಧನಕೊಳ್ಳಗಾಗುತ್ತಾರೆ. ಇವರನ್ನು ಬಂಧನದಿಂದ ಬಿಡುಗಡೆ ಗೊಳಿಸಲು, ಪರಿಹಾರವಾಗಿ ಝೈನಬರು ಪ್ರವಾದಿಯವರ ಪ್ರಿಯಪತ್ನಿ ಖದೀಜಾರ ಕಂಠಿಹಾರವನ್ನು ಕಳುಹಿಸಿಕೊಡುತ್ತಾರೆ. ಅಬೂಆಸ್‌ರವರು ಒಂದು ಗಟ್ಟಿ ಹೃದಯದ ವ್ಯಕ್ತಿ. ಇಸ್ಲಾಂ ಧರ್ಮದ ತತ್ವಗಳನ್ನು ಲೋಕಕ್ಕೆ ಸಾರಲು ನಿಯಕ್ತಿಗೊಂಡಿರುವ ಪ್ರವಾದಿ ಮಹಮ್ಮದರ ಮುಂದೆ, ಇದೇ ವ್ಯಕ್ತಿ ಅತ್ಯಂತ ಧೈರ್ಯದಿಂದ ತಾನು ತನ್ನ ಹಿರಿಯರು ಕಲಿಸಿದ ಸಂಸ್ಕಾರವನ್ನು ಬಿಡಲು ಸಾಧ್ಯವಿಲ್ಲ ಮತ್ತು ಮುಸ್ಲಿಂಮಳಾಗಿರುವ ತನ್ನ ಹೆಂಡತಿಯ ಮೇಲಿನ ಪ್ರೀತಿ ಮತ್ತು ನಮ್ಮಿಬ್ಬರ ನಡುವಿನ ಭಿನ್ನತೆಯು, ಧಾರ್ಮಿಕ ವಿಚಾರಗಳು, ದಾಂಪತ್ಯ ಜೀವನಕ್ಕೆ ಯಾವುದೇ ತೊಡಕಾಗುವುದಿಲ್ಲ ಎಂದು ಅತ್ಯಂತ ಧೈರ್ಯದಿಂದ ಹೇಳುತ್ತಾರೆ. ಜೊತೆಗೆ ಇದೇ ಸಭೆಯಲ್ಲಿ ಪ್ರವಾದಿ ಮಹಮ್ಮದರು ನಡುಕದೊಂದಿಗೆ, ವಿಶ್ವಾಸಿಯ ಮತ್ತು ಅವಿಶ್ವಾಸಿಗಳ ನಡುವಿನ ವಿವಾಹ ಸಂಬಂಧವನ್ನು ಇಸ್ಲಾಂ ಧರ್ಮ, ಅಲ್ಲಾಹನು ನಿಷೇಧಿಸಿದ್ದಾರೆ. ಹಾಗಾಗಿ, ತನ್ನ ಮಗಳು ಮತ್ತು ಅಬೂಆಸ್‌ರವರು ಗಂಡ ಹೆಂಡತಿಯಾಗಿ ಉಳಿದಿಲ್ಲ ಎಂದು ಹೇಳುತ್ತಾರೆ.

ಜಗತ್ತಿನಾದ್ಯಂತ ನೂರಾರು ನಾಗರಿಕತೆಗಳು, ಹುಟ್ಟಿ, ಬೆಳೆದು ನಾಶವನ್ನು ಹೊಂದಿದೆ. ಅಂತಹ ನಾಗರಿಕತೆಗಳಲ್ಲಿ ಅರಬ್ ನಾಗರಿಕತೆಯೂ ಒಂದು.ಇಂದು ಅರಬ್ ದೇಶ ಬಹಳಷ್ಟು ಬೆಳವಣಿಗೆಯನು ಕಂಡಿದೆ ಅದರೂ ಮಕ್ಕಾ ಮತ್ತು ಮದೀನಾ ಪ್ರದೇಶಗಳು ಇಂದಿಗೂ ಇಸ್ಲಾಂ ಧರ್ಮದ ಪವಿತ್ರ ಕ್ಷೇತ್ರಗಳಾಗಿ ಇಂದಿಗೂ ತನ್ನ ಪಾವಿತ್ರತ್ಯೆಯನ್ನು ಕಾಪಾಡಿಗೊಂಡು ಬಂದಿದೆ. ಒಟ್ಟಾರೆಯಾಗಿ ಈ ಕಾದಂಬರಿಯೂ ಮುಸ್ಲಿಂ ಇತಿಹಾಸದ ಬಗೆಗೆ ವಿವರಣೆಯನ್ನು ನೀಡುತ್ತದೆ ಮತ್ತು ಏಳನೇ ಶತಮಾನದ ಅರಬ್ ದೇಶದ ಮಹಿಳೆಯ ಸ್ಥಾನವನ್ನು ಆಯಿಷಾರವರ ವಿಶೇಷ ಉಲ್ಲೇಖದೊಂದಿಗೆ ವಿವರಿಸುತ್ತಾ

ಹೋಗುತ್ತದೆ. ಮುಸ್ಲಿಂ ಇತಿಹಾಸದ ಬಗ್ಗೆ ಅಧ್ಯಯನವನ್ನು ನಡೆಸುವಾಗ 'ಉಮ್ಮ' ಕಾದಂಬರಿಯು ಬಹಳಷ್ಟು ಐತಿಹಾಸಿಕ ಘಟನೆಗಳ ವಿವರವನ್ನು ನೀಡುತ್ತದೆ, ಮತ್ತು ಮಹಿಳಾ ಸ್ಥಿತಿಗತಿಯ ಬಗೆಗೆ ವಿವರಣೆಯನ್ನು ನೀಡುತ್ತದೆ.

ಕರಾವಳಿ ಭಾಗದ ಮುಸ್ಲಿಂ ಸಮಾಜವನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳುವಲ್ಲಿ ಈ ಅಧ್ಯಯನಕ್ಕೆ ಒಳಪಡಿಸಿರುವ ಎಲ್ಲಾ ತರಹದ ಸಾಹಿತ್ಯ ಪ್ರಕಾರಗಳು ಸಮಜಾಯಿಷಿಗಳನ್ನು ನೀಡುತ್ತವೆ. ಕೆಲವೊಮ್ಮೆ ಇಂತಹ ಆಕರಗಳಲ್ಲಿ ಹೆಚ್ಚಾಗಿ ಉತ್ಪ್ರೇಕ್ಷೆಯನ್ನೇ ಕಾಣಲು ಸಾಧ್ಯವಾದರ, ಇಲ್ಲಿ ಒಂದು ವಿಚಾರವನ್ನು ನಾವು ಗಮನಿಸಬೇಕಾಗುತ್ತದೆ ಇತಿಹಾಸಕಾರನ ಬರವಣಿಗೆ ಶೈಲಿಗೂ ಕಾದಂಬರಿಗಾರನ ಬರವಣಿಗೆ ಶೈಲಿಗೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ಅವುಗಳನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಉಪಯುಕ್ತವಾದ ಆಕರಗಳನ್ನೇ ಆಯ್ದುಕೊಳ್ಳಲಾಗಿದೆ. ಈ ಎಲ್ಲಾ ಅಕರಗಳನ್ನು ಇಟ್ಟುಕೊಂಡು ಬಂದು ಉತ್ತಮವಾದ ಅಧ್ಯಯನವನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ ಎಂಬುವುದು ಬಹುಮುಖ್ಯವಾದ ಅಂಶವಾಗಿದೆ. ಒಟ್ಟಾರೆಯಾಗಿ, ಮೇಲಿನ ಎಲ್ಲಾ ಕೃತಿಗಳು, ಒಂದೊಂದು ಅಂಶಗಳಲ್ಲಿ, ವಿವಿಧ ರೀತಿಯ ಮಾಹಿತಿಗಳನ್ನು ನೀಡುವುದರೊಂದಿಗೆ, ಅಧ್ಯಯನಕ್ಕೆ ಪ್ರಮುಖವಾದ ಆಕರಗಳಾಗಿವೆ. ವಾಸ್ತವತೆಗೆ ಹತ್ತಿರವಾದ ಕೃತಿಯು ಒಂದು ಇತಿಹಾಸ ರಚನೆಗೆ ಆಕರವಾಗಲು ಸಾಧ್ಯವಾಗುತ್ತದೆ. ದಾಖಲೆಯ ಮೂಲಕ ಇತಿಹಾಸವು ರಚನೆಯಾಗಬೇಕಾದರೆ, ಕಾದಂಬರಿಗಳು ಕೂಡ ಸತ್ಯಕ್ಕೆ ಹತ್ತಿರವಾದವುಗಳಾಗಿವೆ

<u>ಗ್ರಂಥಋಣ</u>

- ಅಬ್ಬಾಸ್ ಮೇಲಿನಮನಿ–ಜನ್ನತ್ ಮೊಹಲ್ಲಾ –ಲೋಹಿಯಾ ಪ್ರಕಾಶನ–2008–ಬಳ್ಳಾರಿ.
- ಡಾ. ಅಮೂರ. ಈ. ಎಸ್.–ಕನ್ನಡ ಕಥನ ಸಾಹಿತ್ಯ:ಕಾದಂಬರಿ– ಸ್ವಪ್ನ ಬುಕ್ ಹೌಸ್–1994.
- ಬಾರ್ಕೂರು ಉದಯ–ಇತಿಹಾಸದ ಶೋಧ ಗತದ ಹುಡುಕಾಟ, ತುಳು ಸಂಸ್ಕೃತಿ ಚರಿತ್ರೆ ಕಥನ–ಆಕೃತಿಆಶಯ ಪಬ್ಲಿಕೇಶನ್ಸ್, ಮಂಗಳೂರು–2015.
- ಬಾರ್ಕೂರು ಉದಯ–ವಾಸ್ತವದ ಒಡಕುಗಳು ಇತಿಹಾಸದ ತೊಡಕುಗಳು–ಚಿಂತನ ಪುಸ್ತಕ–2012.
- ಬೋಳುವಾರು ಮಹಮ್ಮದ್ ಕುಂಞ–ಸ್ವಾತಂತ್ರ್ಯದ ಓಟ– ಮುತ್ತುಪ್ಪಾಡಿ ಪುಸ್ತಕ ಪ್ರಕಟಣೆ–2012– ಬೆಂಗಳೂರು.

- ಬೋಳುವಾರು ಮಹಮದ್ ಕುಂಞಿ–ಜೆಹಾದ್–ನವಕರ್ನಾಟಕ ಪಬ್ಲಿಕೇಷನ್ಸ್–ಎರಡನೇ ಮುದ್ರಣ –2010–ಬೆಂಗಳೂರು.
- ಬೋಳುವಾರು ಮಹಮದ್ ಕುಂಞಿ –ಓದಿರಿ–ಮುತ್ತುಪ್ಪಾಡಿ ಪುಸ್ತಕ ಪ್ರಕಟಣೆ–ಎರಡನೇ ಮುದ್ರಣ –2015–ಬೆಂಗಳೂರು.
- ಬೋಳುವಾರು ಮಹಮದ್ ಕುಂಞಿ–ಉಮ್ಮ –ಮುತ್ತುಪ್ಪಾಡಿ ಪುಸ್ತಕ ಪ್ರಕಟಣೆ–2018–ಬೆಂಗಳೂರು.
- ಬೋಳುವಾರು ಮಹಮದ್ ಕುಂಞಿ– ಮೋನುಸ್ಮೃತಿ– ನವಕರ್ನಾಟಕ ಪ್ರಕಾಶನ–ಬೆಂಗಳೂರು–2022
- ಚಂದ್ರವದನರಾವ್. ಎಚ್. ಆರ್. (ಅ)–ನಡುರಾತ್ರಿಯಲ್ಲಿ ಸ್ವಾತಂತ್ರ್ಯ–ಸಂವಹನ ಪ್ರಕಾಶನ, ಮೈಸೂರು–2014.
- ಚಂದ್ರಿಕಾ. ಪಿ(ಸಂ)–ಸಾಹಿತ್ಯ ಅಧ್ಯಯನದ ನೆಲೆಗಳು–ಅಭಿನವ ಪ್ರಕಾಶನ, ಬೆಂಗಳೂರು–2017.
- ಚಂದ್ರವದನ. ಹೆಚ್. ಆರ್– ನಡುರಾತ್ರಿಯಲ್ಲಿ ಸ್ವಾತಂತ್ರ್ಯ– ಸಂವಹನ– ಮೈಸೂರು– 1997.
- ಡಾ. ಚಿನ್ನಸ್ವಾಮಿ ಸೋಸಲೆ(ಸಂ)–ಪ್ರಾಚೀನ ಜೈನಕಾವ್ಯಗಳಲ್ಲಿ ಚಾರಿತ್ರಿಕ ಪ್ರಜ್ಞೆ–ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2017.
- ಡಾ. ಗೋವಿಂದರಾಜು. ಸಿ. ಆರ್–ನವಚಾರಿತ್ರಿಕವಾದದ ಅರ್ಥ, ವ್ಯಾಖ್ಯಾನ, ವಿಶ್ಲೇಷಣೆ–ಮೋಹನ್ ಕೃಷ್ಣ ರೈ–ಚರಿತ್ರೆ ಅಧ್ಯಯನ, ಸಂ.7, ಸಂಚಿಕೆ.2–ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2012.
- ಫಕೀರ್ ಮಹಮದ್ ಕಟ್ಪಾಡಿ–ನೊಂಬು–ನವಕರ್ನಾಟಕ ಪಬ್ಲಿಕೇಷನ್ಸ್–1988–ಬೆಂಗಳೂರು.
- ಫಕೀರ್ ಮಹಮದ್ ಕಟ್ಪಾಡಿ–ಸರಕುಗಳು–ನವಕರ್ನಾಟಕ ಪಬ್ಲಿಕೇಷನ್ಸ್ ಬೆಂಗಳೂರು.
- ಫಕೀರ್ ಮಹಮ್ಮದ್ ಕಟ್ಪಾಡಿ– ಕೇರಳದಲ್ಲಿ ಹದಿನೈದು ದಿನಗಳು– ಕನ್ನಡ ಸಾಹಿತ್ಯ ಅಕಾಡೆಮಿ– ಬೆಂಗಳೂರು– 1989.
- ಫಕೀರ್ ಮಹಮ್ಮದ್ ಕಟ್ಪಾಡಿ– ರಾಷ್ಟ್ರೀಯತೆ ಮತ್ತು ಮುಸ್ಲಿಮರು(ವಿಚಾರ ವಿಮರ್ಶೆ)–ಕೊಟ್ಟಾರ ಪ್ರಕಾಶನ– ಮಂಗಳೂರು– 1993.

- ಗಣಪತಿ ರಾವ್ ಐಗಳ್– ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ– ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ– ಉಡುಪಿ– 1923.
- ಗಿರೀಶ್ ಕರ್ನಾಡ್– ಆಡಾಡತ ಆಯುಷ್ಯ– ಮನೋಹರ ಗ್ರಂಥಮಾಲ– ಧಾರವಾಡ– 2002.
- ಗೋರೂರು ರಾಮಸ್ವಾಮಿ ಅಯ್ಯಂಗಾರ್– ನನ್ನ ಸತ್ಯಾನ್ವೇಷಣೆ– ನವಜೀವನ ಪ್ರಕಾಶನ– ಅಹಮದಾಬಾದ್– 2012.
- ಕಕ್ಕಿಲ್ಲಾಯ. ಬಿ. ವಿ(ಸಂ)– ಸ್ವಾತಂತ್ರ್ಯದ ಸ್ವರ್ಣ ಹೆಜ್ಜೆ– ಜಿಲ್ಲಾಡಳಿತ, ಮಂಗಳೂರು ಜಿಲ್ಲೆ– 1998.
- ಕುವೆಂಪು– ನೆನಪಿನ ದೋಣಿಯಲ್ಲಿ– ಉದಯರವಿ ಪ್ರಕಾಶನ– 1980.
- ಇಬ್ರಾಹಿ ಸಈದಿ– ತಪ್ಪು ಕಲ್ಪನೆಗಳು– ಶಾಂತಿ ಪ್ರಕಾಶನ– ಮಂಗಳೂರು– 2017.
- ಇಚ್ಲಂಗೋಡು.ಬಿ. ಎಂ–ತುಳುನಾಡ ಮುಸ್ಲಿಮರು–ಬ್ಯಾರಿ ಸಂಸ್ಕೃತಿ–1997.
- ಮಹಮ್ಮದ್ ಕುಳಾಯಿ– ಕಾಡಂಕಲ್ಲ್ ಮನೆ– ಇರುವೆ ಪ್ರಕಾಶನ– ಮಂಗಳೂರು– 2016.
- ಮುಹಮ್ಮದ್ ಅಬ್ಬಾಸ್ ಪೊಪ್ರಿ(ಮೂಲ)– ಶ್ರೀಕಂಠಯ್ಯ ಬಿ. ಎಂ(ಅನುವಾದ)– ಇಸ್ಲಾ ಸಂಸ್ಕೃತಿ– ಪ್ರಸಾರಾಂಗ– ಮೈಸೂರು ವಿಶ್ವವಿದ್ಯಾನಿಲಯ– 1970.
- ಡಾ. ಮೋಹನ ಕುಂಟಾರ್– ಸಮುದಾಯಗಳ ಕನ್ನಡ ಪರಂಪರೆ– ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ– ಹಂಪಿ– 2012.
- ಶ್ರೀ.ಮುಕುಂದ ಪ್ರಭು ಎಂ. (ಸಂ)– ಪೊಲಿ– ಬಿ.ಎಂ. ಇಚ್ಲಂಗೋಡು– ಬ್ಯಾರಿ ಬೆಳೆದು ಬಂದ ದಾರಿ– ಜಿಲ್ಲಾಧಿಕಾ–, ದಕ್ಷಿಣ ಕನ್ನಡ ಜಿಲ್ಲೆ– ಮಂಗಳೂರು–2000.
- ನಾಗರಾಜಪ್ಪ. ಕೆ.ಜೆ (ಸಂ)– ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು– ಕರ್ನಾಟಕ ಸಾಹಿತ್ಯ ಅಕಾಡೆಮಿ– ಬೆಂಗಳೂರು– 1990.
- ನಾಗವೇಣಿ.ಎಚ್.ಎಸ್–ಗಾಂಧಿ ಬಂದ–ಲೋಹಿಯಾ ಪ್ರಕಾಶನ, ಬಳ್ಳಾರಿ–1999.
- ನಿರಂಜನ– ಚಿರಸ್ಮರಣೆ– ಡಿ. ವಿ. ಕೆ ಮೂರ್ತಿ ಪ್ರಕಾಶನ– ಮೈಸೂರು– 1955.
- ಡಾ. ರವೀಂದ್ರನಾಥ. ಕೆ(ಸಂ)– ಅಧ್ಯಯನದ ವಿಧಿವಿಧಾನಗಳು– ಪ್ರಸಾರಾಂಗ– ಕನ್ನಡ ವಿಶ್ವವಿದ್ಯಾಲಯ– ಹಂಪಿ– 2011.

- ರಹಮತ್ ತರಿಕೆರೆ–ಕನ್ನಡ ಸಾಹಿತ್ಯ ವಾಗ್ವಾದಗಳು–ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ–2008– ಹಂಪಿ.
- ರಹಮತ್ ತರಿಕೆರೆ–ಕರ್ನಾಟಕದ ಸೂಫಿಗಳು–ಅಭಿನವ ಪ್ರಕಾಶನ–2011–ಬೆಂಗಳೂರು.
- ರಹಮತ್ ತರಿಕೆರೆ– ಕಟ್ಟಾಡಿ ಅವರ ಸರಕುಗಳು– ಸಂಕ್ರಮಣ ಸಂಪುಟ.25, ಸಂಚಿಕೆ.9–1990.
- ರಂಜಾನ್ ದರ್ಗಾ– ಸಾಹಿತ್ಯ ಮತ್ತು ಸಮಾಜ– ಭಾರತೀ ಪ್ರಕಾಶನ– ಮೈಸೂರು– 1982.
- ಡಾ. ರವೀಂದ್ರನಾಥ. ಕೆ– ಅಧ್ಯಯನದ ವಿಧಿವಿಧಾನಗಳು–ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ–2011.
- ಶಂಕರನಾರಾಯಣ. ಎನ್. ಪಿ– ನೆಲಕಚ್ಚಿದ ಗುಬ್ಬಚ್ಚಿ– ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ– 1998.
- ಸಾರಾ ಅಬೂಬಕ್ಕರ್–ವಜ್ರಗಳು– ಕನ್ನಡ ಸಾಹಿತ್ಯ ಪರಿಷತ್ತು – 1988– ಬೆಂಗಳೂರು.
- ಸಾರಾ ಅಬೂಬಕ್ಕರ್–ಕದನವಿರಾಮ– ಚಂದ್ರಗಿರಿ ಪ್ರಕಾಶನ–1991– ಮಂಗಳೂರು.
- ಸಾರಾ ಅಬೂಬಕ್ಕರ್ –ತಳ ಒಡೆದ ದೋಣಿಯಲಿ–ಚಂದ್ರಗಿರಿ ಪ್ರಕಾಶನ– 1997–ಮಂಗಳೂರು.
- ಸಾರಾ ಅಬೂಬಕ್ಕರ್–ಇಳಿಜಾರು–ಚಂದ್ರಗಿರಿ ಪ್ರಕಾಶನ–2002–ಮಂಗಳೂರು.
- ಸಾರಾ ಅಬೂಬಕ್ಕರ್–ಪಂಜರ–ಚಂದ್ರಗಿರಿ ಪ್ರಕಾಶನ–2004–ಮಂಗಳೂರು.
- ಸಾರಾ ಅಬೂಬಕ್ಕರ್–ಚಂದ್ರಗಿರಿಯ ತೀರದಲ್ಲಿ–ಚಂದ್ರಗಿರಿ ಪ್ರಕಾಶನ–ಹನ್ನೆರಡನೇ ಮುದ್ರಣ– ಮಂಗಳೂರು–2017.
- ಸಾರಾ ಅಬೂಬಕ್ಕರ್–ಸುಳಿ–ಚಂದ್ರಗಿರಿ ಪ್ರಕಾಶನ –2007–ಮಂಗಳೂರು.
- ಸಾರಾ ಅಬೂಬಕ್ಕರ್– ಮುಸ್ಲಿಂ ಸಂವೇದನೆ ಮತ್ತು ನಾನು– ಸಂಕ್ರಮಣ, ಸಂಪುಟ.20, ಸಂಚಿಕೆ.9– 1991.
- ಸೂರ್ಯನಾಥ್ ಕಾಮತ್(ಸಂ)–ಗೆಜೆಟಿಯರ್ ಅಫ್ ಇಂಡಿಯಾ, ಕರ್ನಾಟಕ ಸ್ಟೇಟ್–ಬೆಂಗಳೂರು–1990.

- ಪ್ರೊ. ಶಿವರಾಮಯ್ಯ–ಸಾಹಿತ್ಯ ಮತ್ತು ಚರಿತ್ರೆ–ಪಿ. ಚಂದ್ರಿಕಾ– ಸಾಹಿತ್ಯ ಅಧ್ಯಯನದ ನೆಲೆಗಳು(ಮನಃಶಾಸ್ತ್ರ, ತತ್ವಶಾಸ್ತ್ರ, ಚರಿತ್ರೆ, ಸಮಾಜಶಾಸ್ತ್ರ, ಭಾಷಾಶಾಸ್ತ್ರಗಳ ಹಿನ್ನೆಲೆಯಲ್ಲಿ)– ಅಭಿನವ ಪ್ರಕಾಶನ–2017.
- ಡಾ. ಸಬೀಹಾ–ಚಂದ್ರಗಿರಿ– ಸಿರಿವರ ಪ್ರಕಾಶನ, ಬೆಂಗಳೂರು–2009.
- ವಿವೇಕ. ರೈ. ಬಿ. ಎ(ಸಂ)–ಮಂಗಳೂರು ದರ್ಶನ(ಸಂ–1)–ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ–2016.

English Books

- Arnold. J. Toynbee- A Study of History, Vol.1- OUP- USA- 1988.
- Benedetto Croce- The theory and history of historiography- 1991.
- Carl Becker-What are Historical Facts-University of Utah-1955.
- Carr E. H. -What is History-Penguin books-London-1987.
- Collingwood. R. G- The idea of History- Oxford University Press- 1994.
- David Lodge- 20th Century Literary Criticism- Longman- 1972.
- Eliot. T.S- Selected Essays- 1989.
- Federick Nicholson(edt)- Gazetteer of South India- Mittal Publication- Delhi- 1988.
- Fritzstern- The varieties of History- Vintage- 1973.
- Gururaj Bhat. P- Tulunadu- M.G.M College Magzine- Vol XIV- 1964.
- Ichlangod.B.M- Bearys of Tulunad- Beary sahitya Academy- Mangalore-2011.
- Lucien Goldman- Towards a Sociology of the Novel- 1975.
- Panikker.K.N-Literature as history of social change(Vol.40)-Social Scientist Publications-2012.
- Francis Buchanan-Journey from Madras through the countries of Mysore, Canara and Coorg (Vol.2)-Madras-1870.

- Mahammed Peer- Muslims education in India Problems and Prospects- Karnataka Muslim Pragathi Parishat- Mangalore- 1991.
- Mohandas Karamachand Gandhi-My Experiments with Truth- translator, Mahadev Desai-Dover Publications-1948.
- Nagarajam. K.- The Development of the Indian Novel- Art and Letters- xxiii:1- 1949.
- Larry Collins and Dominique Lapierre-Freedom at Midnight-William Collins,Simon and scuster-1975.
- Paul. A. Bove- Mastering Discourse- Duke- Durban- 1992.
- Ramesh. K. V- A History of South Canara- Dharwad- 1969
- Raihana.M. Moideen(etal)-Muslim women in South India reading selected narratives of Sara Aboobakker-University of Malaysia.
- Richard Evans-In Defence of History-Granta books- London-1997.
- Roland Barthes- Writing Degree Zero- Jonathan Cape- London- 1967.
- Sayyed Ameer Ali- Islamic History and Culture- Amara Prakashana- Delhi- 1978.
- Sturrock. J- Madras District Mannuals, South Canara- Vol.1- Madras- 1894.
- Stuart. H. A. L- Madras District Mannuals, South Canara- Vol.2- Madras- 1894.
- Srikantasastri. S.- Sources of Karnataka History- Core word- Vol.1- 2002.
- Srikanthika- Dr. S. Srikantha Sastri Felicitation Volume- 2000.
- Sudhir Chandra- The Oppressive Present- Oxford University Press- Delhi- 1992.
- Suryanath. U. Kamath(edt)- Karnataka State Gazetteer- Government of Karnataka.

- Vasantha Madhava K.G - Religions in Coastal Karnataka (1500-1763)- Inter-India Publications- 1985
- Wahab Doddamane- Muslims in Dakshina Kannada-Green Words Publication-1993.

II. JOURNALS:

1. Bulletin of the Deccan College Post-Graduate and Research Institute, Poona.
2. Indian Historical quarterly Review, Calcutta. Indian Historical Review-ICHR, New Delhi.
3. Indian History Congress Proceedings, New Delhi.
4. India's Past and Present- Bi annual Journal of Historical Research, Bombay.
5. Indica-Gem of the Heras Institute of Indian History and Culture, Bombay.
6. Journal of the Bombay Branch of Royal Asiatic Society. Old and New, Bombay.
7. Journal of Bombay-Historical Society, Bombay.
8. Journal of Indian History,. Trivandrum.
9. Journal of the Institute of Indian Studies, Udupi.
10. Journal of Karnataka University. Social Science, Dharwad.
11. Journal of Kerala Studies, Trivandrum.
12. Journal of Peasant Studies, London, J. P. S.
13. Journal of the University of Bombay, Bombay.
14. Karnataka Bharati, Dharwad Karnataka Historical Review, Dharwad.

15. Karnataka Sahitya Parishad Patrika, Bangalore.
16. Quarterly Review of Historical Studies, Institute of Historical Studies Calcutta.
17. Quarterly Journal of Mythic Society, Bangalore.
18. Social Science Proceedings, Delhi.
19. ಇತಿಹಾಸ ದರ್ಶನ- ಕನ್ನಡ ಇತಿಹಾಸ ಅಕಾಡೆಮಿ- ಬೆಂಗಳೂರು.
20. ಹೊಸತು ಮಾಸಪತ್ರಿಕೆ- ಮಂಗಳೂರು
21. ಸಂವಾದ- ಮಂಗಳೂರು

ಪಿಹೆಚ್.ಡಿ ಮಹಾಪ್ರಬಂಧಗಳು

- ಅಶೋಕ ಕುಮಾರ-ಸಾಹಿತ್ಯ ಮತ್ತು ಇತಿಹಾಸದ ಸಂಬಂಧಗಳು ಸಂಸರ ನಾಟಕಗಳ ಮುಖೇನ-ಭಾಷಾ ನಿಕಾಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ-1999.
- ಡಾ. ಇಸ್ಮಾಯಿಲ್. ಎನ್- ಕನ್ನಡ ಸಾಹಿತ್ಯದಲ್ಲಿ ಪ್ರತಿಬಿಂಬಿತವಾದ ಇಸ್ಲಾಂ ಸಂಸ್ಕೃತಿ(ಪ್ರಕಟಿತ ಪಿ. ಎಚ್,ಡಿ ಮಹಾಪ್ರಬಂದ)-ಶಮಾ ಪ್ರಕಾಶನ, ಮಂಗಳೂರು-2007.
- ಹರೀಶ್ ಕುಮಾರ್-ಬೋಳುವಾರು ಮಹಮದ್ ಕುಂಞಿಯವರ ಸಾಹಿತ್ಯ-ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ-2019.
- ಮೋಮಿನ್.ಎಸ್.ಎಂ - ಚಾರಿತ್ರಿಕ ಮಹಿಳೆಯರನ್ನು ಕುರಿತ ಕನ್ನಡ ಕಾದಂಬರಿಗಳು-ಕನ್ನಡ ವಿಶ್ವವಿದ್ಯಾಲಯ-2005-ಹಂಪಿ.
- ರಾಮೇಗೌಡ- ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು- ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು-1989.
- ಶಿವರಾಮ ಭಟ್ಟ ಪಡೀಕಲ್- ಕನ್ನಡ ಕಾದಂಬರಿಯ ಮೊದಲ ಘಟ್ಟ- ಮಂಗಳೂರು ವಿಶ್ವವಿದ್ಯಾನಿಲಯ- 1987.
- ಕವಿತಾ. ಬಿ- ಸಾರಾ ಅಬೂಬಕ್ಕರ್ ಕಥನ ಸಾಹಿತ್ಯದಲ್ಲಿ ಸಾಮಾಜಿಕ ವಿನ್ಯಾಸ -ಕನ್ನಡ ವಿಶ್ವವಿದ್ಯಾಲಯ-2008-ಹಂಪಿ.

- ನೂರ್‌ಜಹಾ.ಎಸ್.ಎಫ್–ಸಾರಾ ಅಬೂಬಕ್ಕರ್‌ರವರ ಕೃತಿಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು–ಕನ್ನಡ ವಿಶ್ವವಿದ್ಯಾಲಯ–2009–ಹಂಪಿ.
- ಪವಿತ್ರ.ಎ. ಎನ್.– ಸಾರಾ ಅಬೂಬಕ್ಕರ್ ಮತ್ತು ಫಕೀರ್ ಮಹಮ್ಮದ್ ಕಟ್ಪಾಡಿ ಅವರ ಸಾಹಿತ್ಯ ತೌಲನಿಕ ಅಧ್ಯಯನ– ಕುವೆಂಪು ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ– ಮೈಸೂರು– 2019.

- ಶಿವರಾಮ ಭಟ್ಟ ಪಡಿಕಲ್– ಕನ್ನಡ ಕಾದಂಬರಿಯ ಮೊದಲ ಘಟ್ಟ– ಮಂಗಳೂರು ವಿಶ್ವವಿದ್ಯಾನಿಲಯ– 1987.
- Avinash. T-Post Modernism-Transcultural study-Kannada University, Hampi-2020.